# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 288 Issue: 288 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 25.05.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2







# ಬೀಜ, ಗೊಬ್ಬರ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿದರೆ ಲೈಸೆನ್ಸ್ ರದ್ದು

## ಸಹಾಯಕ ಕೃಷಿ ನಿರ್ದೇಶಕ ವಾಮದೇವಪ್ಪ ಕೊಳ್ಳಿ ಖಡಕ್ ಎಚ್ಚರಿಕೆ

## ಡಿ.ಎ.ಪಿ ಗೊಬ್ಬರ ಬೆಲೆ 1350 ರೂ। 16/20 ಗೊಬ್ಬರ 1250 ರೂಗೆ ನಿಗದಿ



■ **ಹಂಪಿ ಟೈಮ್ಸ್ ಕೊಟ್ಟೂರು**

ಬೀಜ ಗೊಬ್ಬರ ಮಾರಾಟಗಾರರು ರೈತರಿಗೆ ಹೆಚ್ಚಿನ ಬೆಲೆಯಲ್ಲಿ ಬೀಜ, ಗೊಬ್ಬರ ಮಾರಾಟ ಮಾಡಿದರೆ ನಿರ್ಧಾಕ್ಷಣ್ಯವಾಗಿ ಲೈಸನ್ಸ್ ರದ್ದುಪಡಿಸಲಾಗುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕ ವಾಮದೇವಪ್ಪ ಕೊಳ್ಳಿ ಎಚ್ಚರಿಕೆ ನೀಡಿದರು.

ಪಟ್ಟಣದ ತಾಲೂಕು ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ನಡೆದ ಎಲ್ಲಾ ಕೃಷಿ ಪರಿಕರ ಮಾರಾಟಗಾರರ ರಸಗೊಬ್ಬರ ಹಾಗೂ ಬಿತ್ತನೆ ಬೀಜ ವಿತರಣೆಯ ಸಭೆಯಲ್ಲಿ ಮಾತನಾಡಿ, ಎಚ್ಚರಿಕೆ ನೀಡಿದರು.

ಡಿ.ಎ.ಪಿ ಗೊಬ್ಬರವನ್ನು 1350 ರೂ ಬೆಲೆಗೆ ಮಾರಾಟ ಮಾಡಬೇಕು. 16/20 ಗೊಬ್ಬರ 1250 ರೂ ಗೆ ಮಾರಾಟ ಮಾಡಬೇಕು. ಇದನ್ನು ಬಿಟ್ಟು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿದರೆ ನಿಮ್ಮ ಲೈಸೆನ್ಸ್ ರದ್ದು ಪಡಿಸಲಾಗುವುದು ಎಂದರು.

ತಹಶೀಲ್ದಾರ್ ಅಮರೇಶ ಅಂಗಡಿ ಮಾತನಾಡಿ, ಅಂಗಡಿ ಮಾಲೀಕರು ರೈತರಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳಿ. ರೈತರು ತಮಗೆ ದೂರು ಕೊಟ್ಟರೆ ಮುಲಾಜಿಲ್ಲದೆ ಲೈಸನ್ಸ್ ರದ್ದು ಮಾಡಿ ಎಂದು ಕೃಷಿ ಅಧಿಕಾರಿಗೆ ತಾಕೀತು ಮಾಡಿದರು. ರೈತ ಮುಖಂಡ ಎನ್ ಭರಮಣ್ಣ ಮಾತನಾಡಿ, ರೈತರಿಗೆ ಯಾವುದೇ ತೊಂದರೆಯಾಗದೆ ಸಕಾಲದೊಳಗೆ, ಬೀಜ ಗೊಬ್ಬರ ವಿತರಿಸಿ,



ಅಗತ್ಯ ಮಾರ್ಗದರ್ಶನ ಮಾಡಬೇಕು ಎಂದರು.

ರೈತ ಸಂಘದ ಮುಖಂಡ ಜಯಪ್ರಕಾಶ ನಾಯ್ಕ ಮಾತನಾಡಿ, ಯಾರಾದರು ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದು ಕಂಡು ಬಂದಲ್ಲಿ ಕೃಷಿ ಅಧಿಕಾರಿ ಹಾಗೂ ತಹಶಿಲ್ದಾರರಿಗೆ ದೂರು ಕೊಡುತ್ತೇವೆ. ಎಲ್ಲಾ ಅಂಗಡಿಗಳಲ್ಲಿ ಬೋರ್ಡ್ ಅಳವಡಿಸಿ ಮಾರಾಟದ ಬೆಲೆ ನಮೂದಿಸಬೇಕು ನಿಮ್ಮ ಎಲ್ಲಾ ಸ್ಟಾಕ್ ಗೊಡನ್‌ಗಳಿಗೆ ನಿಮ್ಮ ಅಂಗಡಿ ಹೆಸರು ಬರೆಯಲು ಸೂಚಿಸಬೇಕು ಎಂದು ಹೇಳಿದರು.

ಗುಡಿಯಾರ ಮಲ್ಲಿಕಾರ್ಜುನ ಮಾತನಾಡಿ, ಕೊಟ್ಟೂರು ಕೃಷಿ ಆಫೀಸ್ ನಲ್ಲಿ ಸಿಬ್ಬಂದಿಗಳ ಕೊರತೆ ಇದ್ದು ಇದನ್ನು ಸರಿಪಡಿಸಬೇಕು ಹಾಗೂ ರೈತರ ಹತ್ತಿರ ಸಹನೆಯಿಂದ ನಡೆದು ಕೊಳ್ಳಬೇಕು ಎಂದರು.

ಕೃಷಿಕ ಸಾಮಾಜ ಅಧ್ಯಕ್ಷ ನಾಗೇಶ್ ನೇತೃತ್ವದಲ್ಲಿ ಸಭೆ ನಡೆಯಿತು. ರೈತ ಮುಖಂಡ ಶ್ರೀಧರ, ಮರಳುಸಿದ್ದಪ್ಪ, ಕೃಷಿ ಅಧಿಕಾರಿ ಶ್ಯಾಮಸುಂದರ್, ತಿಮ್ಮಣ್ಣ ಪರಿಕರಗಳ ಮಾರಾಟಗಾರರು ಇನ್ನಿತರರು ಉಪಸ್ಥಿತರಿದ್ದರು.

# ಆತಂಕ ಬೇಡ ಅಂತರ ಕಾಯ್ದುಕೊಳ್ಳಿ

## ಹೊಸಪೇಟೆಯಲ್ಲಿ ಮಹಿಳೆಗೆ ಕರೋನ್ ಪಾಸಿಟಿವ್ । ಈಗ ನಾರ್ಮಲ್!

## ಡಿಎಚ್‌ಒ ಡಾ.ಎಲ್.ಶಂಕರ್ ನಾಯ್ಕ ಹೇಳಿಕೆ। ಸೋಂಕು ಶಂಕಿತರ ತಪಾಸಣೆಗೆ ಸಿದ್ಧ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಉದ್ಯಮಿ 54 ವರ್ಷದ ಮಹಿಳೆಯೊಬ್ಬರಿಗೆ ವಾರದ ಹಿಂದೆ ಕೊರೋನಾ ಪಾಸಿಟಿವ್ ಸೋಂಕು ಕಂಡುಬಂದಿದ್ದು, ಇದೀಗ ಹೋಮ್ ಐಸೋಲೇಷನ್ ಮೂಲಕ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೇ 17 ರಂದು ಮುಂಬಯಿನಿಂದ ಆಗಮಿಸಿದ ಅವರು ಬಳ್ಳಾರಿಯಲ್ಲಿ ಸ್ವಯಂಪ್ರೇರಿತವಾಗಿ ಚಿಕಿತ್ಸೆಗೆ ಒಳಗಾಗಿದ್ದಾರೆ. ಪ್ರಾಥಮಿಕ ಹಂತದಲ್ಲೇ ಕರೋನ ಪಾಸಿಟಿವ್ ಕಂಡುಬಂದಿದ್ದರಿಂದ ಅಗತ್ಯ ಮುಂಜಾಗ್ರತೆಯೊಂದಿಗೆ ಚಿಕಿತ್ಸೆಗೆ ಒಳಗಾಗಿದ್ದರಿಂದ ಈದೀಗ ನಾರ್ಮಲ್ ಆಗಿದ್ದಾರೆ ಎಂದು ಡಿಎಚ್‌ಒ ಶಂಕರ್ ನಾಯ್ಕ ತಿಳಿಸಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿ, ಸೋಂಕಿತ ವ್ಯಕ್ತಿಯ ಮನೆಗೆ ಆರೋಗ್ಯ ಸಿಬ್ಬಂದಿ ಭೇಟಿ ನೀಡಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವರ ಸಂಪರ್ಕದಲ್ಲಿರುವವರನ್ನು ತಪಾಸಣೆಗೊಳಪಡಿಸಲಾಗಿದೆ. ವಾತವಾರಣ ದಿಂದ ಹಲವೆಡೆ ಕೆಮ್ಮ, ನೆಗಡು ಇರುವ ಸಾಧ್ಯತೆಗಳು ಇವೆ. ಯಾರಿಗಾದರೂ ನಿರಂತರ ಕೆಮ್ಮು, ನೆಗಡಿ ಲಕ್ಷಣಗಳು ಕಂಡುಬಂದಿದ್ದಲ್ಲಿ ಕೂಡಲೇ ಸಮೀಪದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ತಪಾಣೆಗೊಳಪಡಬೇಕು. ಯಾರೂ ಆತಂಕ ಪಡಬೇಕಾಗಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಅಂತರ ಕಾಯ್ದುಕೊಳ್ಳುವುದರೊಂದಿಗೆ ಮುಂಜಾಗ್ರತ ಕ್ರಮ ಅನುಸುರಿಸುವುದರಿಂದ ಆರೋಗ್ಯಕರ



ಜೀವನ ತಮ್ಮದಾಗಿಸಿಕೊಳ್ಳಬೇಕು. ಮಾಸ್ಕ್ ಕಡ್ಡಾಯ ಎಂಬ ನಿರ್ದೇಶನವಿನ್ನೂ ಬಂದಿಲ್ಲ. ಗರ್ಭಿಣಿಯರು, ವಯೋವೃದ್ಧರು ಜನಸಂದಣಿ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದರೊಂದಿಗೆ, ಅಂತರ ಕಾಯ್ದುಕೊಳ್ಳುವುದು ಅಗತ್ಯ. ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಿಗೂ ನಿರ್ದೇಶನ ನೀಡಲಾಗಿದೆ. ಐಎಲ್‌ಐ (ಇನ್‌ಫ್ಲುಯೆಂಜಾ ಲೈಕ್ ಎಲ್ನೆಸ್) ಮತ್ತು ಸಾರಿ(ಸೀವಿಯರ್ ಅಕ್ಯೂಟ್ ರೆಸ್ಪಿರೇಟರಿ ಇನ್‌ಫೆಕ್ಷನ್) ಪ್ರಕರಣಗಳ ಮೇಲೆ ನಿಗಾ ಇಡಲಾಗಿದೆ. ಶಂಕಿತರವನ್ನು ಗುರುತಿಸಿ ಪರೀಕ್ಷೆ ನಡೆಸಲಾಗುವುದು. ಸ್ಥಳೀಯ ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಿಡಲು ಸಿದ್ದವಾಗಿವೆ. ಉಸಿರಾಟದ ತೊಂದರೆ ಕಂಡುಬಂದರೆ ತಕ್ಷಣವೇ ವೈದ್ಯಕೀಯ ಸಲಹೆ ಪಡೆಯುವು ಅಗತ್ಯ ಎಂದು ಡಿಎಚ್‌ಒ ತಿಳಿಸಿದ್ದಾರೆ.



ಕರೋನಾ ಸೋಂಕು ತಡೆಗೆ ಆರೋಗ್ಯ ಇಲಾಖೆ ಅಗತ್ಯ ಕ್ರಮವಹಿಸುವ ದರೊಂದಿಗೆ ಜಾಗೃತಿ ಮೂಡಿಸಬೇಕು. ಸೋಂಕು ಕಂಡುಬಂದಲ್ಲಿ ಕೂಡಲೇ ಚಿಕಿತ್ಸೆ ನೀಡಿ ಗುಣಪಡಿಸಬೇಕು. ಕರೋನಾ ಕುರಿತು ಅಪ್ಡೇಟ್ ಮಾಹಿತಿ ನೀಡುವುದರೊಂದಿಗೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಡಿಎಚ್‌ಒಗೆ ಸೂಚಿಸಲಾಗಿದೆ.

– ಎಚ್.ಆರ್.ಗವಿಯಪ್ಪ ಶಾಸಕ



ಕರೋನಾ ಒಂದು ಪ್ರಕರಣ ಕಾಣಿಸಿ ಕೊಂಡಿದ್ದು, ಒಂದು ವಾರವಾಗಿದೆ. ಈಗ ನಾರ್ಮಲ್ ಇದೆ. ಗರ್ಭಿಣಿಯರು, ವಯೋವೃದ್ಧರು ಜನಸಂದಣಿ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದರೊಂದಿಗೆ, ಅಂತರ ಕಾಯ್ದುಕೊಳ್ಳುವುದು ಅಗತ್ಯ. ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಿಗೂ ಶಂಕಿತರ ತಪಸಾಣೆಗೆ ನಿರ್ದೇಶನ ನೀಡಲಾಗಿದೆ. ಐಎಲ್‌ಐ ಮತ್ತು ಸಾರಿ ಪ್ರಕರಣಗಳ ಮೇಲೆ ನಿಗಾ ಇಡಲಾಗಿದೆ.

– ಡಾ.ಎಲ್.ಶಂಕರ್‌ನಾಯ್ಕ, ಡಿಎಚ್‌ಒ

# ಬಸವಣ್ಣ ಕ್ರಾಂತಿಪುರುಷ ಮಾತ್ರವಲ್ಲ, ವಿಶ್ವಖ್ಯಾತಿಯ ಆರ್ಥಿಕ ತಜ್ಞ: ಸಿ.ಎಂ

■ **ಹಂಪಿ ಟೈಮ್ಸ್ ಮೈಸೂರು**

ನಮ್ಮ ಸರ್ಕಾರ ಆರಂಭಿಸಿರುವ 600 ಕೋಟಿಗೂ ಅಧಿಕ ವೆಚ್ಚದ ಅನುಭವ ಮಂಟಪವನ್ನು ಮುಂದಿನ ವರ್ಷ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಆಯೋಜಿಸಿದ್ದ "ಬಸವ ಜಯಂತಿ–2025 ನಮ್ಮ ನಡೆ ಅನುಭವ ಮಂಟಪದ ಕಡೆ" ಕಾರ್ಯಕ್ರಮ ಉದ್ಘಾಟಿಸಿ ಮಾನಾಡಿದರು. ಸಕಲ ವೃತ್ತಿಗಳೂ ಪವಿತ್ರ ಎನ್ನುವ ಮಹಾನ್ ಮಾನವೀಯ ಸಂದೇಶವನ್ನು ಜಗತ್ತಿಗೆ ನೀಡಿದ ಬಸವಣ್ಣನವರು

>>2




## ಮುಂದಿನ ವರ್ಷ 600 ಕೋಟಿ ವೆಚ್ಚದ ಅನುಭವ ಮಂಟಪ ಲೋಕಾರ್ಪಣೆ ಮಾಡ್ತೇವೆ: ಸಿ.ಎಂ ಭರವಸೆ



ಮೊದಲ ಪುಟದಿಂದ

ಕ್ರಾಂತಿಪುರುಷ ಮಾತ್ರವಲ್ಲ, ವಿಶ್ವ ವಿಖ್ಯಾತ ಆರ್ಥಿಕ ತಜ್ಞರೂ ಆಗಿದ್ದರು. ಕಾಯಕ ಮತ್ತು ದಾಸೋಹದ ಶ್ರಮ ಸಂಸ್ಕೃತಿಯ ಮಹತ್ವವನ್ನು ಬಸವಣ್ಣ ಇಡೀ ವಿಶ್ವಕ್ಕೆ ನೀಡಿದರು ಎಂದು ವಿವರಿಸಿದರು.

ಬಸವಾದಿ ಶರಣರಿಂದ ಆದ ಜಾತಿ ವ್ಯವಸ್ಥೆ ವಿರುದ್ದದ ಸಾಮಾಜಿಕ ಕ್ರಾಂತಿ ಪ್ರಪಂಚದ ಬೇರೆ ಎಲ್ಲೂ ನಡೆದಿಲ್ಲ. ಸಮ ಸಮಾಜ ಮತ್ತು ಜಾತ್ಯತೀತ ಸಮಾಜ ನಿರ್ಮಾಣಕ್ಕಾಗಿ ಹೋರಾಡಿದ ಬಸವಾದಿ ಶರಣರು ನುಡಿದಂತೆ ನಡೆದರು ಎಂದು ವಿವರಿಸಿದರು.

ಜಾತಿ, ವರ್ಗ ರಹಿತ ಮಾನವೀಯ ಸಮಾಜ ಅವರ ತುಡಿತವಾಗಿತ್ತು. ಬಸವಾದಿ ಶರಣರ ಅನುಭಾವವೇ ವಚನಗಳಾಗಿವೆ. ವಚನ ಎಂದರೆ ಮಾತು. ಕನ್ನಡ ಸಾಹಿತ್ಯದಲ್ಲಿ ವಚನ ಮತ್ತು ದಾಸ ಸಾಹಿತ್ಯ ದೊಡ್ಡ ಮೈಲಿಗಲ್ಲು. ಅಕ್ಷರ ಸಂಸ್ಕೃತಿಯಿಂದ ವಂಚಿತರನ್ನಾಗಿ ಮಾಡಲಾಗಿದ್ದವರಿಗೆ ವಚನ ಸಾಹಿತ್ಯ ಆಡು ಮಾತಿನ ಮೂಲಕ ತಲುಪಿತು ಎಂದರು.

ಸಂಸ್ಕೃತ ಕಲಿಯುವ ಶೂದ್ರರ ಕಿವಿಗೆ ಕಾದ ಸೀಸ ಉಯ್ಯುವ ಶಿಕ್ಷೆ ಇದ್ದಿದ್ದರಿಂದ ಶೂದ್ರ ಸಮುದಾಯ ಶಿಕ್ಷಣದಿಂದ ವಂಚಿತರಾದರು.

ನನ್ನ ಅಪ್ಪ, ಅಮ್ಮ ಇಬ್ಬರೂ ಶಿಕ್ಷಣದಿಂದ ವಂಚಿತರಾಗಿದ್ದರು. ರಾಜಪ್ಪ ಮೇಸ್ಟು ಕಾರಣದಿಂದ ನಾನು ನೇರವಾಗಿ ಐದನೇ ತರಗತಿಗೆ ದಾಖಲಾಗಿ ಶಿಕ್ಷಣ ಪಡೆದು ಎರಡು ಬಾರಿ ಮುಖ್ಯಮಂತ್ರಿಯಾದೆ. ಅಂಬೇಡ್ಕರ್ ಅವರ ಕಾರಣದಿಂದ ನನಗೆ ಶಿಕ್ಷಣ ಸಿಕ್ಕರೆ, ಸಂವಿಧಾನದ ಕಾರಣದಿಂದ ನಾನು ಮುಖ್ಯಮಂತ್ರಿಯಾದೆ ಎಂದು ವಿವರಿಸಿದರು. ಬಸವ ಬಳಗಗಳ ಒಕ್ಕೂಟದ ಬೇಡಿಕೆಯಂತೆ ಬಸವ ಭವನ ನಿರ್ಮಿಸಲು ಹೆಚ್ಚಿನ ಅನುದಾನವನ್ನು ಒದಗಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

## ಕಮಲಾಪುರದಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟನೆ, ರುಚಿ ಸವಿದ ಶಾಸಕ ಗವಿಯಪ್ಪ



**ಹೊಸಪೇಟೆ ತಾಲೂಕಿನ ಕಮಲಾಪುರದ ಪಟ್ಟಣದಲ್ಲಿ ಶನಿವಾರ ಶಾಸಕ ಹೆಚ್. ಆರ್. ಗವಿಯಪ್ಪ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ, ಉಪಹಾರ ಸವಿದರು. ಪ.ಪಂ.ಸದಸ್ಯರು, ಕಾರ್ಯಕರ್ತರು, ಸಂಘಟನೆಗಳ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.**


## ನಿಮ್ಮ ಬೆಂಬಲವೇ ನಮ್ಮ ಬಲ

**ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.**

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**



## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038




## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**


# ಕತ್ತಲಿನಿಂದ ಬೆಳಕಿನೆಡೆಗೆ ನಡೆಯೋಣ



ಅಸತೋಮಾ ಸದ್ಗಮಯಾ, ತಮಸೋಮ ಜ್ಯೋತಿರ್ಗಮಯಾ, ಮೃತ್ಯೋಮ ಅಮೃತಂಗಮಯಾ ಎಂಬ ಪ್ರಸಿದ್ಧ ನುಡಿಯನ್ನು ಕೇಳಿದ್ದೇವೆ. ಆದರೆ ಈ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವುದೇ ಜೀವನ. ಹಾಗಿರುವಾಗ ಬದುಕಲ್ಲಿ ಕತ್ತಲು ಬರುವುದು ಸಹಜ. ನಿಸರ್ಗದಲ್ಲಿ ಕತ್ತಲು ಕಳೆದು ಬೆಳಕು ಮೂಡುವ ಹಾಗೆ ಒಂದಲ್ಲ ಒಂದು ದಿನ ಎಲ್ಲರ ಬದುಕಲ್ಲೂ ಬೆಳಕು ಮೂಡೇ ಮೂಡುತ್ತದೆ. ಆದರೆ ಕಾಯುವ ತಾಳ್ಮೆ ನಮಗಿರಬೇಕಷ್ಟೇ?

ಮಾನವ ಜೀವಿತ ಎಂಬುದು ಒಂದು ಅನಿರೀಕ್ಷಿತ ಪಯಣ. ಈ ಪಯಣದಲ್ಲಿ ಬಿದ್ದೇನೋ ಎಂಬ ಭಯ, ಸದ್ದಿಲ್ಲದ ಕತ್ತಲು, ನಿರಾಶೆಯ ನೆರಳುಗಳು ನಮ್ಮನ್ನು ಸುಳಿಯುತ್ತಲೇ ಇರುತ್ತವೆ. ಆದರೆ, ಪ್ರತಿಯೊಂದು ಕತ್ತಲಿಗೂ ಪರ್ಯಾಯವಾಗಿ ಒಂದು ಬೆಳಕು ಸದಾ ಇದೆ. ಈ ಬೆಳಕನ್ನು ಕಂಡು ಅದರೆಡೆಗೆ ಹೆಜ್ಜೆ ಹಾಕುವವರೇ ಜೀವನದಲ್ಲಿ ಯಶಸ್ಸು ಗಳಿಸುವವರು.

ಬದುಕಿನಲ್ಲಿ ಎಲ್ಲವನ್ನೂ ನಿಭಾಯಿಸಬಹುದೇನೋ ಎಂಬ ಭ್ರಮೆಯೊಂದಿಗೆ ನಾವು ನಮ್ಮ ಪಯಣ ಆರಂಭಿಸುತ್ತೇವೆ. ಆದರೆ ಕೆಲವೇ ದಿನಗಳಲ್ಲಿ ನಾವು ಅರ್ಥಮಾಡಿಕೊಳ್ಳುವುದು ಏನೆಂದರೆ, ಬದುಕು ನೇರರೇಖೆಯಲ್ಲ. ಅದು ಹರಿಯುವ ಹಳ್ಳದಂತೆ – ಶಾಂತವಾಗಿಯೂ ಇರುತ್ತದೆ, ಪ್ರಚಂಡ ಜಲಪಾತವಾಗಿ ಗದ್ದಲಿಸಬಹುದೂ ಇದೆ. ಈ ಹರಿವಿನಲ್ಲಿಯೇ ನಮ್ಮೊಳಗಿನ ಕತ್ತಲುಗಳು ಅರಳುತ್ತವೆ.

ಜೀವನದಲ್ಲಿ ಕತ್ತಲು ಎಂದರೇನು? : ಕತ್ತಲು ಎಂದರೆ ಕೇವಲ ಬೆಳಕಿನ ಅಭಾವವಲ್ಲ. ಅದು ನಾವೇನೂ ಸಾಧಿಸಲಾರವೋ ಎಂಬ ದಿಗ್ಭ್ರಮೆ, ಆತ್ಮವಿಶ್ವಾಸದ ಕೊರತೆ, ಸೋಲಿನ ಭಯ, ನಿಜವಾದ ದಿಕ್ಕಿನ ಅರಿವಿಲ್ಲದ ಸ್ಥಿತಿಯೂ ಹೌದು. ಒಂದುಕಾಲದಲ್ಲಿ ಪವರ್ ಕಟ್ ಆಗಿ ಮನೆ ಕತ್ತಲಿನಲ್ಲಿ ಕೂರುವಷ್ಟು ಸುಲಭದ ವಿಷಯವಲ್ಲ ಅದು. ಅದು ಅಂತರಂಗವನ್ನು ತಿನ್ನುವ ನಿಶ್ಯಬ್ದ ನರಕ.

ಕತ್ತಲು: ಒಂದು ಮಾನಸಿಕ ಸ್ಥಿತಿ : ಇಲ್ಲಿಯ ಕತ್ತಲು ಭೌತಿಕ ಅಲ್ಲ. ಅದು ಆತ್ಮೀಯ. ನಾವು ಅನಿಸಿಕೊಳ್ಳುವ ಏಕಾಂಗತೆಯು, ಸೋಲಿನ ಅನುಭವ, ನಿರಾಶೆಯ ನಿರಂತರ ಕುರುಡುತಿರುಳುಗಳು ನಮ್ಮೊಳಗಿನ ಬೆಳಕು ಮೊಳಕೆ ಬೇಳದಂತೆ ಮಾಡುತ್ತದೆ.

"ನಾನು ಏಕೆ ಈ ಭೂಮಿಯಲ್ಲಿ ಜನಿಸಿದ್ದೆ?", "ನನ್ನ ಬದುಕಿಗೆ ಉದ್ದೇಶವೇನು?", "ನಾನು ಎಂದಾದರೂ ಯಶಸ್ವಿಯಾಗಬಹುದೆ?"

ಇಂತಹ ಪ್ರಶ್ನೆಗಳು ಉದಯಿಸುವಾಗ, ಜೀವನವೆಂದರೆ ಕತ್ತಲು ತುಂಬಿದ ಕೋಣೆ ಅನ್ನಿಸುತ್ತೆ. ಆದರೆ ದಯವಿಟ್ಟು ನೆನಪಿಡಿ – ಕತ್ತಲಿಗೆ ಶಾಶ್ವತತೆ ಇಲ್ಲ. ಅದು ಬೆಳಕಿಗೆ ಸಾದರವಾದ ಆಹ್ವಾನ ಮಾತ್ರ. ವ್ಯಕ್ತಿತ್ವ ವಿಕಾಸದಲ್ಲಿ ಈ ಕತ್ತಲಿನ ಪಾತ್ರ : ಹೌದು, ಕತ್ತಲೂ ಅವಶ್ಯಕ. ಬೆಳಕಿನ ಮೌಲ್ಯ ತಿಳಿಯಲು ಕತ್ತಲು ಬೇಕು. ತೊಂದರೆಗಳ ಮೂಲಕ ಜೀವನ ಓದುವುದು ಮನುಷ್ಯನಿಗೆ ನಿಜವಾದ ಆಳತೆಯನ್ನೂ, ವಿವೇಕವನ್ನೂ ನೀಡುತ್ತದೆ.

**ಒಂದು ಸತ್ಯ ಘಟನೆ :** ವಿದ್ಯಾರ್ಥಿ ಜೀವನದಲ್ಲಿ, "ಅನುಪಮ" ಎಂಬ ಹುಡುಗಿಯು ಎಲ್ಲರಿಗಿಂತ ಮಂದವಾದ ವಿದ್ಯಾರ್ಥಿನಿ ಎಂಬ ಗುರುತಿನಲ್ಲಿ ಬಾಳುತ್ತಿದ್ದಳು. ಪರೀಕ್ಷೆಗಳಲ್ಲಿ ಕಡಿಮೆ ಅಂಕಗಳು, ಶಿಕ್ಷಕರ ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯ ಕೊರತೆ, ಎಲ್ಲವೂ ಆಕೆಯ ಆತ್ಮವಿಶ್ವಾಸವನ್ನು ಕುಗ್ಗಿಸುತ್ತಿದ್ದವು. ಮನೆಯಲ್ಲಿಯೂ ಚಿಂತೆಯ ವಾತಾವರಣ. ಆಕೆ ಹೇಳಿದ ಒಂದು ವಾಕ್ಯ, "ನಾನು ಎಲ್ಲರಿಗಿಂತ ಹಿಂದುಳಿದವಳಾಗಿದ್ದರಿಂದಲೇ ನಾನು ನನ್ನೊಳಗೆ ಒಂದು ಬೆಳಕನ್ನು ಹುಡುಕಲು ಹೊರಟೆ." ಅವಳ ಒಂದು ಬದಲಾವಣೆಯ ಹೆಜ್ಜೆ: ಪ್ರತಿದಿನವೂ ದಿನಚರಿಯನ್ನು ಬರೆದಳು, ಓದಿದ ವಿಷಯವನ್ನು ತನ್ನದೇ ಭಾಷೆಯಲ್ಲಿ ಬರೆಯಲು ಆರಂಭಿಸಿದಳು, ದಿನಕ್ಕೆ 15 ನಿಮಿಷ ಧ್ಯಾನ ಮಾಡುವ ಅಭ್ಯಾಸವನ್ನೂ ಜಾರಿಗೊಳಿಸಿದಳು. ವರ್ಷದಿಂದ ವರ್ಷಕ್ಕೆ ತನ್ನ ಮೆರುಗು ತೋರಿಸುತ್ತಾ, ಕಾಲೇಜಿನಲ್ಲಿ ಸ್ವತಃ ಉಪನ್ಯಾಸಕಿಯಾದಳು. ಇದೊಂದು ಉದಾಹರಣೆ ಮಾತ್ರ. ನಮ್ಮೆಲ್ಲರ ಜೀವನದಲ್ಲಿಯೂ ಅಂತಹ ಸಾವಿರ ಅನುಪಮಗಳು ಇದ್ದಾರೆ. ಅವರಿಗೆ ಕತ್ತಲು ಕಾಳಗ ನೀಡಿದರೂ ಅವರು ಬೆಳಕನ್ನು ತಮ್ಮಿಂದಲೇ ಹುಡುಕಿದರು.

**ಪ್ರಕಟವಾದ ಅನುಭವ – ಬೆಳಕು ಕಂಡ ತಕ್ಷಣ :** 2015ರಲ್ಲಿ ಮಂಗಳೂರಿನಲ್ಲಿ ನಾನು ಭಾಗವಹಿಸಿದ್ದ ವ್ಯಕ್ತಿತ್ವ ವಿಕಾಸ ಶಿಬಿರದಲ್ಲಿ 18 ವರ್ಷದ ಅರ್ಜುನ್ ಎಂಬ ಹುಡುಗನು ಬಂದ್ರು. ಮಾತು ಕಡಿಮೆ, ತಲೆ ಕೆಳಗೆ. ಮೊದಲ ದಿನದಷ್ಟು ಮುಗ್ಗರಿಸಿದ್ದ ಅವನು ಕೊನೆಯ ದಿನ ನಿಂತು, ಧೈರ್ಯದ ಮಾತುಗಳನ್ನು ಕೇಳಿಸಿದ. ಅವನ ಕತೆ ಹೀಗೆ: ಬಡ ಕುಟುಂಬ. ತಂದೆಯ ಸಾವು, ತಾಯಿ ಕೆಲಸಕ್ಕೆ ಹೋಗುತ್ತಿದ್ದವರು. ಸೋದರನ ವಿದ್ಯಾಭ್ಯಾಸದ ಹೊಣೆ ಅವನದಾಗಿತ್ತು. ಮನೆಯಲ್ಲಿ ಬೆಳಕು ಮಾತ್ರವಲ್ಲ, ಭವಿಷ್ಯದ ನಂಬಿಕೆಯೂ ಕಡಿಮೆಯಿತ್ತು. ಆದರೆ ಒಂದು ದಿನ ಆತನಿಗೆ ಶಿಕ್ಷಕನು ಹೇಳಿದ್ದಂತೆ: "ನಿನ್ನೊಳಗಿನ ಬೆಳಕಿಗೆ ನಿನ್ನೆಷ್ಟೇ ಕತ್ತಲಿದ್ದರೂ ತಡೆ ಬರಲ್ಲ. ನೀನೇ ನಿನಗೆ ಬೆಳಕು." ಅವನ ಜೀವನ ಬದಲಾಗಿದ್ದು, ದಿನಚರಿಯಲ್ಲಿ ತಾನೇ ಗುರಿ ನಿಗದಿಪಡಿಸಿ, ಓದಿ, ಕೊನೆಗೆ ಸರ್ಕಾರಿ ಉದ್ಯೋಗವೊಂದನ್ನು ಪಡೆದಿದ್ದ.



ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

Scan For Digital Colourful HAMPI TIMES E-paper

**ಅರ್ಥಪೂರ್ಣ ಬೆಳಕಿನ ಕಡೆಗೆ – ವ್ಯಕ್ತಿತ್ವದ 5 ಬೆಳಕು ಹೆಜ್ಜೆಗಳು:**

**1. ಆತ್ಮಪರಿಶೀಲನೆ :** ಪ್ರತಿ ದಿನ 5 ನಿಮಿಷ – ನಾನು ಯಾವ ತಪ್ಪು ಮಾಡಿದೆ? ಏನು ಕಲಿತೆ? – ಎಂಬ ಪ್ರಶ್ನೆಗಳಿಗೆ ಉತ್ತರ ನೀಡಿ.

**2. ದೃಢ ಉದ್ದೇಶ :** ಬದುಕಿನಲ್ಲಿ ನಾವೇಕೆ ಬದುಕುತ್ತೇವೆ ಎಂಬ ಪ್ರಶ್ನೆಗೆ ಉತ್ತರ ಹುಡುಕಿದರೆ, ಕತ್ತಲು ಸರಿಯುತ್ತೆ.

**3. ಪರಿಷ್ಕಾರ ಅಭ್ಯಾಸ :** ಸಣ್ಣ, ಅಲ್ಪ ಅಭ್ಯಾಸಗಳು ಬೆಳಕಿನ ಮಾರ್ಗದಶಕ.

**4. ವಿಷಯದ ಅರಿವು :** ನಮ್ಮ ಸುತ್ತಲೂ ಇರುವ ಹೊಸದನ್ನು ತಿಳಿಯುವ ಚಟ – ವ್ಯಕ್ತಿತ್ವ ವಿಕಾಸಕ್ಕೆ ಮಾರ್ಗ.

**5. ಅನುಕಂಪ ಮತ್ತು ಧೈರ್ಯ:** ನಾವು ತೊಂದರೆಯಲ್ಲಿದ್ದಾಗಲೇ ಇತರರ ನೋವಿಗೂ ಸ್ಪಂದಿಸಿದರೆ, ಅದು ಆಂತರಿಕ ಬೆಳಕಿಗೆ ಕಾರಣವಾಗುತ್ತದೆ.

**ಅಂತಹ ಬೆಳಕಿಗೆ ನೀವು ಹೇಗೆ ಸಾಗಬಹುದು?**

**1. ಒಪ್ಪಿಕೊಳ್ಳುವುದು – ಮೊದಲ ಹೆಜ್ಜೆ :** ನಮ್ಮೊಳಗಿನ ದುಃಖವನ್ನೂ, ಅಸಮರ್ಥತೆಯ ಭಾವವನ್ನೂ ಒಪ್ಪಿಕೊಳ್ಳುವುದು ಬಹುಮುಖ್ಯ. ಓಡಿಸಿಬಿಡುವಷ್ಟರಲ್ಲಿ ಅದು ಬಿಕ್ಕಟ್ಟಾಗಿ ವಿಕಸಿಸುತ್ತದೆ. ಒಪ್ಪಿಕೊಂಡರೆ ಪರಿಹಾರ ಸಾಧ್ಯ.

**2. ಪ್ರೇರಣೆಯ ಶಕ್ತಿಯನ್ನು ಅರಿಯಿರಿ:** ಪ್ರತಿ ಜೀವನಕ್ಕೂ ಒಂದು ಉದ್ದೇಶವಿದೆ. ನಿಮ್ಮನ್ನು ಏನು ಹರ್ಷಗೊಳಿಸುತ್ತದೆ? ನೀವು ಏನೆಲ್ಲಾ ಮಾಡಬಹುದು? ಆ ಪ್ರಶ್ನೆಗಳಿಗೆ ಉತ್ತರ ಹುಡುಕುವ ಮೂಲಕ ನಮ್ಮೊಳಗಿನ ಶಕ್ತಿಯನ್ನು ಅರಿಯಬಹುದು.

**3. ಸುದೃಢ ಅಭ್ಯಾಸಗಳು ಬೆಳಕು ತರುತ್ತವೆ:** ಬೆಳಿಗ್ಗೆ 10 ನಿಮಿಷ ಧ್ಯಾನ. ದಿನಚರಿ ಬರೆದು ಕಾಯ್ದಿರಿಸುವ ಅಭ್ಯಾಸ. ದಿನಕ್ಕೊಂದು ಹೊಸದನ್ನು ಕಲಿಯುವ ಅಭ್ಯಾಸ. ಇವು ವ್ಯಕ್ತಿತ್ವವನ್ನು ಬೆಳಗಿಸುವ, ಕತ್ತಲನ್ನು ಕತ್ತರಿಸುವ ಉಪಕರಣಗಳು.

**4. ಸೋಲನ್ನು ಮರು ಅರ್ಥಗೊಳಿಸಿ :** ಸೋಲನ್ನು "ನಾನು ವಿಫಲ" ಎಂಬುದಾಗಿ ನೋಡಿ ಬಿಟ್ಟರೆ ಅದು ಕತ್ತಲು. ಆದರೆ "ಇದು ಕಲಿಕೆಗೆ ಅವಕಾಶ" ಎಂಬ ದೃಷ್ಟಿಕೋಣದಲ್ಲಿ ನೋಡಿದರೆ, ಅದು ಬೆಳಕು.

**5. ಸತತ ಪಯಣ – ನಿರಂತರ ಪ್ರಯತ್ನ :** ಯಾವತ್ತೂ ನಿಂತು ಹೋಗಬೇಡಿ. ಮುಂದಕ್ಕೆ ಚಲಿಸಿ. ಪ್ರತಿದಿನವೂ ಸಣ್ಣ ಹೆಜ್ಜೆ. ಕತ್ತಲನ್ನು ಬೆಳಕಿನಲ್ಲಿ ಕರಗಿಸಲು ಇದೊಂದು ಶಾಶ್ವತ ಮಾರ್ಗ.

**ನಿಮ್ಮೊಳಗಿನ ಬೆಳಕು ಯಾವತ್ತೂ ಜೀವಂತ :** ನೀವು ಯಾವುದೇ ಕತ್ತಲಿನಲ್ಲಿ ಇರಬಹುದು – ಆದರೆ ನಿಮ್ಮೊಳಗಿನ ಬೆಳಕಿಗೆ ಬಾಗಿಲು ಸುದಿನವೂ ತೆರೆಯಬಹುದು. ಈಗ ನೀವು ಓದುತ್ತಿರುವ ಈ ಪಾಠವೇ ಆ ಬೆಳಕು ತಲುಪಲು ಮೊದಲ ಹೆಜ್ಜೆಯಾಗಬಹುದು. "ಹಗಲಿಗೆ ಸೂರ್ಯ ಬೇಕು, ಆದರೆ ನವೀನ ಬದುಕಿಗೆ ನಾವೇ ಸೂರ್ಯ." ನಮ್ಮೊಳಗಿನ ಬೆಳಕನ್ನು ಹೊತ್ತಿಹೋಗೋಣ. ಯಾಕೆಂದರೆ, ನಮ್ಮ ಬೆಳಕು ಇನ್ನು ಹಲವರಿಗೆ ದಾರಿ ತೋರಿಸಬೇಕು.

**ಬೆಳಕಿನೆಡೆಗೆ ಹೆಜ್ಜೆಯಿಡಿ :** ಕತ್ತಲು ಎಂದರೆ ಅಂತ್ಯವಲ್ಲ. ಅದು ಒಂದು ಶೂನ್ಯ ಸ್ಥಿತಿ – ಬೆಳಕನ್ನು ಹುಡುಕುವ ಅವಕಾಶ. ನಮ್ಮೊಳಗಿನ ಬೆಳಕು ನಮಗೆ ನಾವೇ. ಅದನ್ನು ನಾವು ಅರಿತಾಗ ಮಾತ್ರ, ನಾವು ಬೆಳಕಿನೆಡೆಗೆ ನಡೆಯಲಾರುವುದು. ಮರೆತುಹೋಗಬೇಡಿ – ಯಾವ ಬೆಳಕನ್ನಾದರೂ ನಿಮ್ಮೊಳಗೇ ಹುಡುಕಿ. ಹೆಜ್ಜೆ ಇಡಿ, ಬೆಳಕು ಕಾದಿದೆ!


# ಅದ್ದೂರಿ ಮದುವೆ ಸಮಾರಂಭಕ್ಕೆ ಕಡಿವಾಣ ಎಂದು?

ಇತ್ತೀಚಿಗೆ ಮದುವೆ ಸಮಾರಂಭಗಳು ಮನೆ ಹಳ್ಳಿ ಗಳಲ್ಲಿ ನಡೆಸುವುದು ಕಷ್ಟಸಾಧ್ಯ. ಏಕಂದರೆ ಮದುವೆ ಗೃಹಪ್ರವೇಶದಂತ ಸಮಾರಂಭಕ್ಕೆ ಕನಿಷ್ಠ ಸಾವಿರ ಸಂಖ್ಯೆಗೆ



ಗರಿಷ್ಠ ಐದು ಸಾವಿರ ಹತ್ತು ಸಾವಿರ ದವರೆಗೆ ಸೇರುತ್ತಾರೆ. ಆದುದರಿಂದ ಅಷ್ಟೊಂದು ಸಂಖ್ಯೆಯ ಜನರಿಗೆ ಸ್ಥಳಾವಕಾಶ ಊಟ ತಿಂಡಿ ವಸತಿ ಕಲ್ಪಿಸುವದು ಸುಲಭದ ಮಾತಲ್ಲ ಹಾಗಾಗಿ ಅಷ್ಟು ಸಂಖ್ಯೆಯ ಜನಗಳನ್ನು ನಿಭಾಯಿಸಲು ನಗರಗಳಲ್ಲಿ ರುವ ಛತ್ರ ಕಲ್ಯಾಣ ಮಂಟಪಗಳು, ದೊಡ್ಡ ದೊಡ್ಡ ರೇಸಾರ್ಟ್‌ಗಳನ್ನು ಹುಡುಕಾಡ ಬೇಕಾಗುತ್ತದೆ.

ಇಷ್ಟೊಂದು ಸಂಖ್ಯೆಯ ಜನಸೇರಸಲು ತಿಂಗಳ ಗಟ್ಟಲೆ ಸಮಯ ಬೇಕಾಗುತ್ತದೆ. ಇಲ್ಲಿಯೂ ಸಹ ಸ್ಪರ್ಧಾತ್ಮಕ ವಾಗಿ ಪ್ರತಿಷ್ಠೆ ತೋರಿಸಲು ಶ್ರಮಿಸಿರುತ್ತಾರೆ. ಅದರಲ್ಲಿ ವಿ.ಐ.ಪಿಗಳು ಬರಬೇಕು ಎಂಬ ಪ್ರತಿಷ್ಟೆಯುಳ್ಳವರು ಬಹಳ. ಅದಲ್ಲದೆ ಊಟದ ಪದಾರ್ಥಗಳು ಸಹಿತ ಹೆಸರು ಹೇಳಲಾರದಂತಹ ಖಾದ್ಯಗಳನ್ನು ತಯಾರಿಸಿ ಹೆಗ್ಗಳಿಕೆ ತೋರಿಸುವದರಲ್ಲಿಯೂ ಸಹ ಪ್ರತಿಷ್ಠೆ. ಮದುವೆ ಮಂಟಪಗಳು ರಾತ್ರಿ ಸಮಯದಲ್ಲಿ ಬೇರೆ, ಬೆಳಗ್ಗ ಬೇರೆ, ಮಾಂಗಲ್ಯಧಾರಣೆಗೆ ಬೇರೆ ಬೇರೆ ರೀತಿಯ ಸ್ವರ್ಗವನ್ನು ಹೋಲುವ ಅಲಂಕಾರಿಕ ಸೆಟ್ಟುಗಳು, ಮದುವೆ ಸಮಾರಂಭವನ್ನು ಪೋಟೋ-ವಿಡಿಯೋ ಗಳನ್ನು ಮಾಡುವುದು ಸಹ ಮದುವೆಯ ಕಾರ್ಯಕ್ರಮದಲ್ಲಿ ಮುಖ್ಯ ವಾದುದು. ಹೀಗೆ ಮದುವೆ ಸಮಾರಂಭದಲ್ಲಿ ಸೇರುವ ಜನರು. ಇತ್ತೀಚಿಗೆ ಊಹೆಗೂ ಮೀರಿ ಸೇರುತ್ತಾರೆ. ಮದುವೆಗೆ ಆಹ್ವಾನ ಪತ್ರಿಕೆ ನೀಡಿದ ವರೆಲ್ಲರೂ ಹಾಜರಾಗಿ ಶುಭಾಶಯಗಳನ್ನು ಕೋರಿ ವಧು ವರರಿಗೆ ಮುಯ್ಯಿ, ಉಡುಗೊರೆ ನೀಡಿ ಸವಿಸವಿಯಾದ ಭೋಜನ ಸವಿದು ವಾಪಸ್ ಮನೆಗಳಿಗೆ ತೆರಳುತ್ತಾರೆ. ಇದು ಸಂತೋಷದ ವಿಷಯವಾದರೂ, ಇಂತಹ ಜನ ಸೇರುವ ಮದುವೆ ಸಮಾರಂಭಗಳನ್ನು ನಿಯಂತ್ರಣ ಮಾಡಬೇಕಾಗಿದೆ. ಏಕೆಂದರೆ ಅಷ್ಟೊಂದು ಹಣ ಖರ್ಚು ಮಾಡಿ ಸಾವಿರಾರು ಜನರು ತಮ್ಮ ಕೆಲಸಗಳನ್ನು ಬದಿಗೊತ್ತಿ ಸಾವಿರಾರು



ರೂಪಾಯಿಗಳನ್ನು ಖರ್ಚು ಮಾಡಿ ಮದುವೆ ಸಮಾರಂಭದಲ್ಲಿ ಭಾಗವಹಿಸುವ ಅವಶ್ಯಕತೆ ಇತ್ತೇ?. ಇಷ್ಟೊಂದು ಜನರನ್ನು ಸೇರಿಸಿ ಅದ್ದೂರಿಯಾಗಿ ಪ್ರತಿಷ್ಟೆಗಾಗೀ ಮದುವೆಯ ಮಾಡುವದರಿಂದ ವಧುವರರ ತಂದೆ ತಾಯಿ ಗಳು ಖರ್ಚು ಮಾಡಿದ ಹಣ ದುಡಿದು ಗಳಿಸಿಟ್ಟಿದ್ದರೆ ಪರವಾಗಿಲ್ಲ, ಆದರೆ ಈಗ ಯಾರೂ ಕೂಡ ಮಕ್ಕಳ ಮದುವೆಗಾಗಿ ಹಣಕೂಡಿಸಿಟ್ಟುರುವವರು ಬಹು ವಿರಳ. ಇವರು ವೇತನದ ಮೇಲೂ, ಬಂಗಾರದ ಮೇಲೇ ನಿವೇಶನ ಜಮೀನುಗಳನ್ನು ಅಡವಿಟ್ಟು ಸಾಲಗಳನ್ನು ಮಾಡಿ ಮದುವೆ ಮಾಡಿದರೆ ಬಡ್ಡಿ ಕಟ್ಟುವುದಕ್ಕೆ ದುಡಿಮೆ ಸರಿ ಹೋಗುತ್ತದೆ. ಸಾಲ ತೀರಿಸವದು ಕಷ್ಟಸಾಧ್ಯ. ಇಂತಹ ಮದುವೆಗಳು ಬೇಕಾ?

ಕನಿಷ್ಠ ವೆಂದರೂ ಬಟ್ಟೆ ಬಂಗಾರದ ಬಿಟ್ಟು ಉಳಿದ ಛತ್ರ ಊಟ, ಲಗ್ನ ಪತ್ರಿಕೆ, ವಿಡಿಯೋ ನೀರು ಡೆಕೋರೇಷನ್, ಮೆರವಣಿಗೆ, ವಾದ್ಯಗಳು ಇತ್ಯಾದಿ ಇತ್ಯಾದಿ ಎಂದು ಕನಿಷ್ಠ ವೆಂದರೂ ಐದಾರು ಲಕ್ಷಗಳೇ ಬೇಕು. ಈಗಿರವಾಗ ಇದನ್ನು ನಿಯಂತ್ರಿಸಲೇ ಬೇಕಾದ ಅಂಶ. ಇಂತಹ ಅದ್ದೂರಿ ಜನಸಂದಣಿ ಮದುವೆಗಳನ್ನು ನಿಯಂತ್ರಣಕ್ಕೆ ಸರಕಾರ ಮಧ್ಯಸ್ಥಿಕೆವಹಿಸಿ ಕೆಲ ಕಠಿಣ ಕ್ರಮಗಳನ್ನು ಜಾರಿಗೊಳಿಸುವ ಮೂಲಕ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳನ್ನು ಆರ್ಥಿಕ ಹೊರೆಗೆ ಸಿಲುಕುವುದನ್ನು ತಡೆಯಬಹುದಾಗಿದೆ.

1) ಒಂದು ಮದುವೆಗೆ ಗರಿಷ್ಟ 100 ಜನರನ್ನು ನಿಗದಿಗೊಳಿಸುವದು

2) ಊಟದ ಮೆನುಗಳಿಗೆ ಚಾರ್ಟನ್ನು ಸಿದ್ದಪಡಿಸುವದು

3) ಪ್ರತಿ ಮದುವೆ ಮಾಡಿಕೊಳ್ಳುವ ವಧು ವರರ ತಂದೆ ತಾಯಿಗಳು ತಹಶೀಲ್ದಾರ್ ರಿಂದ ಅಥವಾ ಪೊಲೀಸ್ ಠಾಣೆಯ ಅಧಿಕಾರಿಗಳು, ಗ್ರಾಮ ಪಂಚಾಯಿತಿಯ ಪರವಾನಗಿ ಪಡೆದಿರಬೇಕು.

4) ಅಂದೆ ಮದುವೆಯ ನೋಂದಣಿ ಕಡ್ಡಾಯ ಗೊಳಿಸಬೇಕು.

5) ವಿದ್ಯುತ್ ಬಳಕೆ ಗೂ ಸಹಿತ ಪರವಾನಗಿ ಪಡೆಯಬೇಕು ಹೀಗೆ ಕಡ್ಡಾಯವಾಗಿ ಕ್ರಮ ಜರುಗಿಸಿದರೆ ಕೆಲವಾರು ವರ್ಷಗಳಲ್ಲಿ ನಿಯಂತ್ರಣಕ್ಕೆ ಬರುತ್ತದೆ ಎಂಬುದನ್ನು ಅರಿಯಬೇಕು. ಇದಕ್ಕೆ ಸಾರ್ವಜನಿಕರ ಸಂಘ ಸಂಸ್ಥೆಗಳ ಸಹಾಕಾರ ಸಹ ಪ್ರಮುಖವಾಗಿ ಬೇಕೇಬೇಕು. ಅದ್ದೂರಿ ಮದುವೆಗಳಿಗೆ ಕಡಿವಾಣ ಬೀಳಲು ಸಾರ್ವಜನಿಕರು ಮಠ ಮಾನ್ಯಗಳು, ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳು, ಸಾಮೂಹಿಕ ವಿವಾಹದಲ್ಲಿ ಮದುವೆ ಮಾಡಲು ಉತ್ತೇಜನ ನೀಡಬೇಕು ಹಾಗಾದರೆ, ಅದ್ದೂರಿ ಮದುವೆ ಗಳಿಗೆ ಕಡಿವಾಣ ಬೀಳುತ್ತದೆ.

**– ನಂದಿ ಬಸವರಾಜ ನಿವೃತ್ತ ಶಿಕ್ಷಕರು ಕೂಡ್ಲಿಗಿ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಟ್ರೆಂಡಿಂಗ್ ಎಂಬ ಭ್ರಮೆಯ ಬೆನ್ನೇರಿ...
## "ಸಾಮೂಹಿಕ ಸನ್ನಿಯ ಸೃಷ್ಟಿ" ಪಾಶದಲ್ಲಿ ಬಿದ್ದೀರಿ ಜೋಕೆ!

ನಾವು ಹಂಗಾ ನೋಡ್ರಿ, ನಮ್ಮದು ವಿಚಾರ ಏನಿದ್ರೂ ನಮ್ಮ ಮೂಗಿನ ನೇರಕ್ಕೆ ಇರ್ತದೆ. ಅಲ್ರೀ ಬೇರೆಯವರ ಗೊಡವೆ ಕಟಗೊಂಡು ನಮಗೇನು ಆಗಬೇಕೈತಿ? ಅವನೇನು ನಮ್ಮ ಅಣ್ಣ ಅದಾನೊ ಬೆನ್ನಿಗೆ ಬಿದ್ದಾನೊ. ನೀವು ಏನಾ ಹೇಳ್ರಿ ಈ ಅತಿಯಾದ ಕುತೂಹಲ ಮನುಷ್ಯನಿಗೆ ಒಳ್ಳೆಯದಲ್ಲ ನೋಡು, ಎನ್ನುವಂತಹ ನಮ್ಮ ಹಳ್ಳಿಗರ ಮಾತು ಎಷ್ಟು ಸರಿ ಐತಿ ನೋಡ್ರಲ್ಲ.

ನಾವ್ ಸಣ್ಣವರಿದ್ದಾಗ ನಮ್ಮ ಶಾಲೆಯಲ್ಲಿ ನಮ್ಮ ಕನ್ನಡ ಮಾಸ್ತಾರರು ಪದೇ ಪದೇ ಹೇಳತಿದ್ದ ಮಾತು "ಯಾವುದೋ ಒಂದು ವಿಚಾರ, ವಸ್ತುವನ್ನು ಸುಮ್ನೆ ನೋಡುವುದರಿಂದ ಅದರ ಬಗ್ಗೆ ಪರಿಪೂರ್ಣವಾದ ತಿಳುವಳಿಕೆ ಬರುವುದಿಲ್ಲ, ಬದಲಿಗೆ ಆ ವಸ್ತು ವಿಚಾರದ ಬಗ್ಗೆ ವ್ಯವಸ್ಥಿತವಾಗಿ "ವೀಕ್ಷಿಸುವುದರಿಂದ" ಸರಿಯಾದ ಪದ್ದತಿಯಲ್ಲಿ ಅವಲೋಕಿಸುವುದರಿಂದ ಆ ವಿಚಾರ ಮತ್ತು ವಸ್ತುವಿನ ಬಗ್ಗೆ ಒಂದು ಹಂತದ ಸರಿಯಾದ ಮಾಹಿತಿಯನ್ನು, ತಿಳುವಳಿಕೆಯನ್ನು ಹೊಂದಬಹುದಾಗಿದೆ.

ಆಗ ನಮಗೆಲ್ಲ ಈ ಶಬ್ದಗಳ ಬಗ್ಗೆ ಅವುಗಳು ನೀಡುವಂತಹ ವೈಟೇಜ್ ಬಗ್ಗೆ ಅಷ್ಟೇನು ವ್ಯತ್ಯಾಸ ಕಂಡುಬರುತ್ತಿರಲಿಲ್ಲ, ಎರಡೂ ಶಬ್ದಗಳ ಅರ್ಥ ಮೇಲ್ನೋಟಕ್ಕೆ ಒಂದೇ ಎನ್ನುವಂತೆ ಕಾಣುತ್ತಿದ್ದರೂ, ಆ ಎರಡೂ ಶಬ್ದಗಳು ಒಂದೇ ಕ್ರಿಯೆಯ ಕ್ರಿಯೆಯನ್ನು ಸೂಚಿಸುತಿದ್ದರೂ, ಆ ಎರಡೂ ಶಬ್ದಗಳು ನೀಡುವ ವೈಟೇಜ್ ಮತ್ತು ಆ ಶಬ್ದಗಳ ಪ್ರಯೋಗದ ಪರಿಣಾಮದಲ್ಲಿ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ.

ಅಂತೆಯೇ, ಪ್ರಸ್ತುತ ಸನ್ನಿವೇಷದಲ್ಲಿ ನಮ್ಮ ಸಮಾಜದಲ್ಲಿ ನಮ್ಮ ಸುತ್ತಲೂ ನಡೆಯುವ ಘಟನೆಗಳನ್ನು ಗಮನಿಸಿದಾಗ ನಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳುವ ಅಗತ್ಯತೆಯನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ನಮ್ಮ ಸುತ್ತಲು ಏನು ನಡೆಯುತ್ತಿದೆ, ಅದರ ಕುರಿತು ನಾವು ಏನು ಮಾತನಾಡುತ್ತಿದ್ದೇವೆ? ಮತ್ತು ಆ ಘಟನೆಗಳ ಕುರಿತಾಗಿ ನಾವು ಏನು ಯೋಚಿಸುತಿದ್ದೇವೆ? ಹಾಗು ಇವುಗಳ ಕುರಿತಾದ ನಮ್ಮ ಯೋಚನೆಗಳು ನಿಜವಾಗಿಯೂ ನಮ್ಮವೇ ಆಗಿವೆಯೇ ಅಥಾವ ಬೆರೆಯವರ ಅಭಿಪ್ರಾಯದ ಹೇರಿಕೆ ಆಗುತ್ತಿದೆಯೇ? ಇದೆನ್ನೆಲ್ಲ ಯಾರು ನಿರ್ಧರಿಸುತ್ತಿದ್ದಾರೆ..? ಎನ್ನುವುದು ನಮ್ಮ ಮುಂದಿರುವ ಯಕ್ಷ ಪ್ರಶ್ನೆಯಾಗಿದೆ.

ಹೌದು, ನಮ್ಮ ದೈನಂದಿನ ಬದುಕಿನಲ್ಲಿ ನಮ್ಮ ಭಾವನೆಯನ್ನು, ನಮ್ಮ ಭಾವಗಳನ್ನು ಪ್ರಚೋದಿಸಿ, ನಮ್ಮನ್ನು ಪ್ರೇರೇಪಿಸಿ ನಮ್ಮ ಆಲೂಚನೆಗಳನ್ನು ಬದಲಾಯಿಸುವ ಶಕ್ತಿಗಳನ್ನು ನಾವು ಗುರುತಿಸಿ ಅದನ್ನು ಪ್ರಶ್ನಿಸುವುದರ ಮೂಲಕ ಅಂತಹ ವಿಚಾರಗಳಿಂದ ದೂರವಿರಬೇಕು. ಇಲ್ಲದೆ ಹೋದರೆ ಅವರ ವಿಚಾರಧಾರೆಗಳನ್ನು ನಮ್ಮವೆಂದು ಬಿಂಬಿಸುವ ಮೂಲಕ ತಮ್ಮ ಬೆಳೆಯನ್ನು ಬೇಯಿಸಿಕೊಳ್ಳುವ ಜನರೇ ಹೆಚ್ಚಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಅನಗತ್ಯವಾಗಿ ಇವರ ಮಾಯಾಜಾಲದಲ್ಲಿ ಸಿಕ್ಕಿಹಾಕಿಕೊಳ್ಳುವ ಅಪಾಯವಿದೆ.



ಇಂದಿನ ಮಾಧ್ಯಮ ವ್ಯವಸ್ಥೆಯನ್ನು ಒಮ್ಮೆ ನೋಡಿ, ಸಮಾಜದಲ್ಲಿನ ಕೆಲವೇ ಕೆಲವು ಜನರು ಅವರ ಪ್ರಭಾವವನ್ನು ಬಳಸಿ ತಮ್ಮ ಸುತ್ತಮುತ್ತಲಿನ ಜನರನ್ನು ಮತ್ತು ನಮ್ಮ ಸುತ್ತಲಿನ ಸಾಮಾಜಿಕ ವ್ಯವಸ್ಥೆಯನ್ನು, ಸಾಮಾಜಿಕ ಪ್ರವೃತ್ತಿಗಳನ್ನು ಹಾಗೂ ನಮ್ಮ ಆಲೋಚನೆ ಗಳನ್ನು ಒತ್ತಾಯ ಪೂರ್ವಕವಾಗಿ ರೂಪಿಸುತ್ತಾರೆ.

ನಿಜವಾಗಿಯೂ ನಮ್ಮ ಆವಶ್ಯಕತೆ, ನಮ್ಮ ಅನಿವಾರ್ಯತೆಗಳನ್ನು ಮರೆಮಾಚಿ, ಅವರದೇ ಆದ ವಿಚಾರಧಾರೆಗಳನ್ನು ನಮ್ಮ ಮೇಲೆ ಹೇರುತ್ತಾರೆ,

ಯಾರು, ಯಾವಾಗ ಯಾವ ವೇದಿಕೆಯ ಮೂಲಕ ಏನನ್ನು ಮಾತಾಡುವುದು, ಏನನ್ನು ಮಾಡುವುದು ಎಂಬುದನ್ನು ಅವರೇ ನಿಗದಿಪಡಿಸುತ್ತಾರೆ. ಮತ್ತು ನಮ್ಮ ಜನರು ಅವರನ್ನೇ ಅನುಸರಿಸುತ್ತಾರೆ. ಇಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ, ನಮ್ಮ ಸ್ವಂತ ಅಭಿಪ್ರಾಯಗಳನ್ನೇ ಅವರು ಹೇಳುತ್ತಿದ್ದಾರೆ ಎಂದು ನಾವು ಅಂದುಕೊಳ್ತೇವೆ. ಆದರೆ ಅದು ಹಾಗಲ್ಲ, ನಿಜ ಏನೆಂದರೆ ಅವರ ಅಭಿಪ್ರಾಯವನ್ನು ನಮ್ಮ ಮೇಲೆ ಹೇರುತ್ತಾರೆ. **ಉದಾಹರಣೆಗೆ:**

1.ನಾವು ನೋಡುವಂತಹ ಜಾಹಿರಾತುಗಳು.

2.ವಿವಿಧ ಕಂಪನಿಯ ಪ್ರಚಾರಗಳು.

ಇಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡುವುದಾದರೆ. ನಮ್ಮ ಫೀಡ್ ಏನೇ ಇರಲಿ, ನಾವು ಯಾವುದರ ಬಗ್ಗೆ ಯೋಚಿಸಬೇಕಿದೆ ಎಂದು ನಿರ್ಧರಿಸುವವರು ನಾವೇ ಆಗಿರಬೇಕು. ಆದರೆ ನಿಜವಾ ಗಲೂ ನಾವು ಹಾಗೆ ಇದ್ದೇವೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಈಗ ನೋಡಿ, ಹಾಗೆ ಒಮ್ಮೆ ಯೋಚಿಸಿ ನಮ್ಮ ಆಲೋಚನಾ ಶಕ್ತಿ, ನಾವು ಒಪ್ಪಿಕೊಳ್ಳುತ್ತಿರುವ ಸಾಮಾನ್ಯ ಅಭಿಪ್ರಾಯಗಳು ನಮ್ಮ ವೈಚಾರಿಕ ಹರಿವು ಮತ್ತು ಅವುಗಳ ನಿಯಂತ್ರಣವನ್ನು ಮಾಡುವವರು ಯಾರು? ನಿಜಕ್ಕೂ ಅಲ್ಲಿ ನಮ್ಮ ಅಭಿಪ್ರಾಯಗಳನ್ನು ನಮ್ಮದಾಗಿಯೇ ಇರಲು ಬಿಟ್ಟಿದ್ಯಾರೆಯೇ ಎಂಬುದನ್ನು ಅರ್ಥೈಸಿಕೊಳ್ಳಬೇಕು. ಅದಕ್ಕಾಗಿ ಮೊದಲ ನಾವು ಕೆಲ ಸಾಮನ್ಯ ತಪ್ಪುಗಳನ್ನು ಮಾಡಬಾರದು. ಅಂದರೆ,

1. ಈ ಅಜೆಂಡ ಸೆಟ್ಟಿಂಗ್ಗಳನ್ನು ಬಿಡಬೇಕು,
2. ಒಂದು ರೀತಿಯ ಟ್ರೆಂಡಿಂಗ್ ಪ್ರಾಮುಖ್ಯತೆಯ ಭ್ರಮೆಯನ್ನು ಬಿಡಬೇಕು. ರಚನಾತ್ಮಕ ಕೌಶಲ್ಯವನ್ನು ಬೆಳೆಸಲು ಸಹಕರಿಸಬೇಕು.
3. ಜೊತೆಗೊಂದಿಷ್ಟು ಸಂಭವನೀಯ ಸಮಸ್ಯೆಗಳನ್ನು ಅನಾವಶ್ಯಕವಾಗಿ ವೈಭವೀಕರಿಸಿವುದನ್ನೂ ಬಿಡಬೇಕು.
4. ಹಾಗೆಯೇ, ಇದು ಹೀಗೆ ಮತ್ತು ಅವನು ಹಾಗೆ ಎಂದು ಒಬ್ಬರ ಕುರಿತಾಗಿ, ಒಂದು ಸಾಮಾನ್ಯ ಹೇಳಿಕೆಯನ್ನು ಹೇಳುವ ಬದಲಿಗೆ ಅವರ ಅಭಿಪ್ರಾಯ ವನ್ನು ಅವರ ಜೀವನ ವಿಧಾನಗಳನ್ನು ವಿಧಾನಗಳನ್ನು ಹರಿಯುವುದರಿಂದ ಸಾರ್ವಜನಿಕ ಅಭಿಪ್ರಾಯ ರೂಪಿಸುಲು ಸಹಾಯವಾಗುತ್ತದೆ.

ಹಾಗಾದರೆ ಈ ರೀತಿಯ ಅಭಿಪ್ರಾಯ ಹೇರಿಕೆಯನ್ನು ಅಥವಾ ಸಾಮೂಹಿಕ ಸನ್ನಿಯನ್ನು ತಡೆಯಲು ನಾವೇನು ಮಾಡಬಹುದು?

1. ನಾವು ಆದಷ್ಟೂ ಯಾವುದೇ ಭಾವ ಪ್ರಚೋದಕ, ಆಕ್ರೋಶಕಾರಕ ಅಂಶಗಳನ್ನು ಅಥವಾ ಅಂತವರನ್ನು ಕಂಡಾಗ ಎಚ್ಚರಿಕೆಯಿಂದ ಇರಬೇಕು.
2. ಯಾವುದೇ ವಿಷಯಗಳು, ನಡೆದ ದುರಂತಗಳು, ಸಾಮಾಜಿಕ ಮಾಧ್ಯಮಗಳ ನೆಡೆಯ ಬಗ್ಗೆ ಆಗಾಗ ವಿಮರ್ಶಿಸಿಸಬೇಕು.
3. ನಮ್ಮ ದೈನಂದಿನ ಮಾಧ್ಯಮಗಳ ವಿವಿಧ ಸುದ್ದಿಗಳ ಬಗ್ಗೆ ಜಾಗರಕರಾಗಿರಬೇಕು.
4. ನಮ್ಮ ನಿಮ್ಮೆಲ್ಲರ ಭಾವನೆಯನ್ನು ಪ್ರಚೋದಿಸುವ, ಅವರದೇ ಆದ ಅಜೆಂಡಗಳನ್ನು, ಅವರು ನಮ್ಮ ಆಲೋಚನೆಗಳನ್ನಾಗಿ ಬದಲಾಯಿಸುವ ಪ್ರಕ್ರಿಯೆಯನ್ನು, ಅಂತಹ ಶಕ್ತಿಗಳನ್ನು ಮೊದಲೇ ಗುರುತಿಸಿ ತಡೆಹಿಡಿಯಬೇಕು.

ನೆನಪಿರಲಿ ನಮ್ಮ ಹಸುವು ಇಂಗಲು ನಾವೇ ತಿನ್ನಬೇಕೇ ಹೊರತು ಬೇರೆಯವರಲ್ಲ, ಅಂತೆಯೇ ನಮ್ಮ ಆಲೋಚನೆಗಳನ್ನು ನಾವು ಮಾಡಬೇಕೇ ಹೊರತು ಬೇರೆಯವರಲ್ಲ ಎನ್ನುವುದನ್ನು ಮರೆಯಬಾರದು.

ಹೀಗೆ ಸಮಾಜದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ದುಷ್ಠ ಶಕ್ತಿಗಳ ಸಾಮೂಹಿಕ ಸನ್ನಿಯಂತಹ ವೈಚಾರಿಕ ದಾಳಿಗಳನ್ನು ತಡೆಯಬೇಕು. ಟ್ರೆಂಡಿಂಗ್ ಎಂಬ ಭ್ರಮೆಯ ಬೆನ್ನೇರಿ..., "ಸಾಮೂಹಿಕ ಸನ್ನಿಯ ಸೃಷ್ಟಿ" ಪಾಶದಲ್ಲಿ ಬೀಳದಂತೆ ಎಚ್ಚರವಹಿಸಬೇಕು.


ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

## ಕವಿ ಮನಸು

### ಸಹೋದರ

ಬಾಲ್ಯದ ತುಂಟಾಟಗಳ ಜೊತೆಗಾರ
ನೀಡುವನು ಸಲಹೆ ಸಹಕಾರ
ಗೊಂದಲವ ಬಗೆಹರಿಸುವ ಸಲಹೆಗಾರ
ಸಮಸ್ಯೆಗಳಿಗೆ ನೀಡುವನು ಪರಿಹಾರ

ತಂದೆಯ ಹಾಗೆ ಕಾಳಜಿ ಮಾಡುವನು
ತಾಯಿಯಂತೆ ಮಮತೆಯ ತೋರುವನು
ನಾ ಅಳುವಾಗ ತಾನು ಮರುಗುವನು
ಕಷ್ಟ ಸುಖಕ್ಕೆ ಬೆನ್ನೆಲುಬಾಗಿಹನು

ಸೋತು ಕುಗ್ಗಿದಾಗ ಹೆಗಲ ನೀಡುವನು
ಮನದ ನೋವಿಗೆ ಸ್ಪಂದಿಸುವನು
ಸಹೋದರನು

– ಚೇತನ ಭಾರ್ಗವ ಬೆಂಗಳೂರು

ಹಂಪಿ ಟೈಮ್ಸ್
SCAN TO WATCH

SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಅಪ್ಪ ಎಂಬ ಆಪ್ತರಕ್ಷಕ

ಅದೊಂದು ಮಧ್ಯಮ ವರ್ಗದ, ತಂದೆ,ತಾಯಿ, ಎರಡು ಗಂಡು ಒಂದು ಹೆಣ್ಣು ಮಗು ಇರುವ ಪುಟ್ಟ ಸಂಸಾರ. ಇಬ್ಬರು ಗಂಡು ಮಕ್ಕಳಿಗಿಂತ ತಂದೆಗೆ ಹೆಣ್ಣುಮಗಳ ಮೇಲೆ ಅಪಾರ ಪ್ರೀತಿ. ಹೈಸ್ಕೂಲಿಗೆ ಬಂದ ಗಂಡು ಮಕ್ಕಳು ಪರಸ್ಪರ ಜಗಳ ಮಾಡುತ್ತಿರುವಾಗ ತಂದೆ ಮಕ್ಕಳನ್ನು ಸಮಾಧಾನಪಡಿಸಿದರು. ಇಬ್ಬರೂ ಮಕ್ಕಳು ಅವನು ಮುದ್ದಿನ ಮಗ ಅದಕ್ಕೆ ಅವನಿಗೆ ನೀವು ಏನೂ ಹೇಳುವುದಿಲ್ಲ ಎಂದು ಪರಸ್ಪರ ದೋಷಾರೋಪಣೆ ಹೊರಿಸಿದರು. ಉತ್ತರವಾಗಿ ತಂದೆ ಅತ್ಯಂತ ಸಮಾಧಾನದಿಂದ ನೀವಿಬ್ಬರೂ ನನ್ನೆರಡು ಕಣ್ಣುಗಳಿದ್ದಂತೆ ಎಂದು ಹೇಳಿದರು. ಹಾಗಾದರೆ ನಾನು?? ಎಂದು ಅಲ್ಲಿಯೇ ಜಗಳ ನೋಡುತ್ತಿದ್ದ ಪುಟ್ಟ ಮಗಳು ಅಸುರಕ್ಷತಾ ಭಾವದಿಂದ ಕೇಳಿದಳು. ಕೂಡಲೇ ಎಚ್ಚೆತ್ತ ತಂದೆ ನೀನು ನನ್ನ ಹೃದಯ ಮಗು ನಿನಗೆ ನೋವಾದರೆ ನನಗೂ ನೋವಾಗುತ್ತದೆ ಎಂದು ಹೇಳಿದರು. ಅದೇ ಕೊನೆ ಆ ಅಣ್ಣ ತಮ್ಮಂದಿರು ಎಂದೂ ತಮ್ಮ ತಂಗಿಯೊಂದಿಗೆ ಕಿತ್ತಾಡುವುದಾಗಲಿ ಕಿರಿಕಿರಿ ಮಾಡುವುದಾಗಲಿ ಮಾಡಲಿಲ್ಲ. ಆಕೆಯನ್ನು ಮಗುವಿನಂತೆ ಪೊರೆದರು. ಇಂದು ಅವರಿಲ್ಲದಿದ್ದರೂ ತಂದೆಯ ಎಲ್ಲಾ ಆದರ್ಶಗಳನ್ನು ಮೈಗೂಡಿಸಿಕೊಂಡು ಆ ಮಕ್ಕಳು ಪರಸ್ಪರ ಹೊಂದಾಣಿಕೆಯಿಂದ ಜೀವಿಸುತ್ತಿದ್ದಾರೆ. ಇದು ಮಕ್ಕಳಿಗೆ ಅಪ್ಪ ಕೊಡುವ ಭಾವನಾತ್ಮಕ ಮತ್ತು ನೈತಿಕ ತಾಕತ್ತು.

ನೂರಾರು ಕಿಲೋಮೀಟರ್‌ಗಳ ದೂರ ತನ್ನ ಬೈಕ್ ನಲ್ಲಿ ಪಯಣಿಸುತ್ತಿದ್ದ ಆ ತಂದೆ ನಿವೃತ್ತರಾದ ನಂತರ ವಯೋಸಹಜವಾಗಿ ಬೆಂಗಳೂರಿನ ಟ್ರಾಫಿಕ್ ನಲ್ಲಿ ಗಾಡಿ ಓಡಿಸಲು ಮಾತ್ರವಲ್ಲ ಹಿಂದೆ ಕುಳಿತು ಕೊಳ್ಳಲು ಕೂಡ ಭಯ ಪಡುತ್ತಿದ್ದರು. ಆದರೆ ಒಮ್ಮೆ ಭೀಕರ ಆರೋಗ್ಯ ತೊಂದರೆಯಿಂದ ಮಗ ಆಸ್ಪತ್ರೆಗೆ ದಾಖಲಾದಾಗ ಅದೇ ತಂದೆ ಬೆಂಗಳೂರಿನ ತುದಿ ಭಾಗದಿಂದ ಮೆಜೆಸ್ಟಿಕ್ ವರೆಗೆ ಬೈಕ್ ನಲ್ಲಿ ಹೋಗಿ ತನ್ನ ಮಗನಿಗಾಗಿ ಔಷಧಿಗಳನ್ನು ಖರೀದಿಸಿ ತಂದರು. ಇದು ಮಕ್ಕಳನ್ನು ಉಳಿಸಿಕೊಳ್ಳಲು ಮಾಡುವ ತಂದೆಯ ಕಸರತ್ತು..... ಅದಕ್ಕೆ ಅಪ್ಪ ಜೀವ ರಕ್ಷಕ,ದೇವರು ಕೊಟ್ಟ ಬದುಕಿನ ಬಹುದೊಡ್ಡ ಗಿಫ್ಟ್.


ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮಗ ಅತ್ಯಂತ ಕಡಿಮೆ ಅಂಕಗಳನ್ನು ಪರೀಕ್ಷೆಯಲ್ಲಿ ಪಡೆದು ಬಂದಾಗ ಅಮ್ಮ ಸಹಜವಾಗಿಯೇ ಕೋಪದಿಂದ ಕೂಗಾಡಿದರೆ ಅಪ್ಪ ಮಗನನ್ನು ಕೂರಿಸಿಕೊಂಡು ತನ್ನ ಸ್ನೇಹಿತ ಹಲವಾರು ಬಾರಿ ಪಿಯುಸಿ ಪರೀಕ್ಷೆಯಲ್ಲಿ ಫೇಲ್ ಆಗಿ ಪ್ರಯತ್ನ ಬಿಡದೆ ಓದಿದ್ದರ ಫಲವಾಗಿ ಪೆಥಾಲಜಿಸ್ಟ್ ಆಗಿರುವ ಉದಾಹರಣೆ ನೀಡಿ ಆತನಲ್ಲಿ ಹುಮ್ಮಸ್ಸು ತುಂಬಿದರು. ಫೇಲಾಗುವುದು ತಪ್ಪಲ್ಲ ಆದರೆ ಪ್ರಯತ್ನ ಮಾಡದೇ ಇರುವುದು ಬಹುದೊಡ್ಡ ತಪ್ಪು ಎಂದು ತಿಳಿಹೇಳಿದರು..... ಅದಕ್ಕೆ ಹೇಳುವುದು ಅಪ್ಪ ಆಪ್ತ ಸಲಹೆಗಾರ ಮತ್ತು ಆಪದ್ಬಾಂಧವ.

ಹೀಗೆ ಹೇಳುತ್ತಾ ಹೊರಟರೆ ಅಪ್ಪನ ಕುರಿತು ನೂರಾರು ವಿಷಯಗಳು ಪ್ರತಿ ಮನೆ ಮನೆಗಳಿಂದ ಹೊರ ಬರುತ್ತವೆ. ದೈಹಿಕವಾಗಿ 9 ತಿಂಗಳು ಹೊರುವ ತಾಯಿ ಭಾವನಾತ್ಮಕವಾಗಿ ಮಕ್ಕಳೊಂದಿಗೆ ತಂದೆಗಿಂತ ಹೆಚ್ಚು ಮಿಳಿತಗೊಂಡಿರುತ್ತಾಳೆ. ಅಪ್ಪ ಎಂದರೆ ಶಿಸ್ತು ಅಪ್ಪ ಎಂದರೆ ಕೋಪ ಎಂಬ ಸಾತ್ವಿಕ ಭಯ ದಿಂದ ಗಂಡುಮಕ್ಕಳು ಅಪ್ಪನಿಂದ ಕೊಂಚ ದೂರವೇ ಇರುತ್ತಾರೆ. ಗಂಡು ಮಕ್ಕಳ ಪಾಲಿಗೆ ಅಪ್ಪ ಬಾಸ್, ಹಿಟ್ಲರ್, ಹೆಡ್ ಮಾಸ್ಟರ್ ಎಲ್ಲವೂ ಆಗಿರುತ್ತಾನೆ. ಮಕ್ಕಳು ಶಿಸ್ತಿನ ಜೀವನ ಶೈಲಿ ರೂಡಿಸಿಕೊಳ್ಳಲು ಅಪ್ಪನ ಈ ಅವತಾರಗಳು ಅತ್ಯಂತ ಅವಶ್ಯಕ..... ಅಪ್ಪ ಬಾಸ್, ಹಿಟ್ಲರ್, ಹೆಡ್ ಮಾಸ್ಟರ್ ನಿಜ. ಆದರೆ ಇವೆಲ್ಲವಗಳ ಹಿಂದೆ ಹೆಂಗರುಳಿನ ಅಪ್ಪ ಕಾಣುವುದೇ ಕಣ್ಣಲ್ಲಿ ನೀರಿನ ಪಸೆ ಇರುವುದಿಲ್ಲ ಆದರೆ ಹೃದಯದಲ್ಲಿ ಕೋಲಾಹಲವಿರುತ್ತದೆ. ಎದೆ ಸೆಟೆಸಿ ನಡೆಯುವ ಅಪ್ಪ ತನ್ನ ಮಕ್ಕಳ ಭವಿಷ್ಯಕ್ಕಾಗಿ ಬೇರೊಬ್ಬರ ಮುಂದೆ ಬೆನ್ನು ಬಾಗಿಸಿ ನಿಂತಿರುತ್ತಾನೆ. ಮನೆಯಲ್ಲಿ ದರ್ಪ ತೋರಿಸುವ ಅಪ್ಪ ಮೇಲಧಿಕಾರಿಗಳ ಅಡಿಯಲ್ಲಿ ದಯನೀಯವಾಗಿ ಕಾರ್ಯನಿರ್ವಹಿಸುತ್ತಿರುತ್ತಾನೆ. ಅಮ್ಮ ಮನೆ ಸಂಬಾಳಿಸುತ್ತಾಳೆ ನಿಜ ಆದರೆ ಅಪ್ಪ ಮನೆಯ ಸಂಭಾಳಿಸಲು ಬೇಕಾದ ಆರ್ಥಿಕ ಶಕ್ತಿಗಾಗಿ ಜಗತ್ತಿನೊಂದಿಗೆ ಹೋರಾಟ ನಡೆಸಿರುತ್ತಾನೆ..... ಅದಕ್ಕೆ ಅಪ್ಪ ಪ್ರಬಲ ಹೋರಾಟಗಾರ

ಹೆಣ್ಣು ಮಕ್ಕಳು ಗಂಡು ಮಕ್ಕಳಂತೆ ಅಪ್ಪನಿಗೆ ಹೆದರುವುದಿಲ್ಲ ..ಅವರು ಅಪ್ಪನ ಮಕ್ಕಳು, ಅಪ್ಪನ ಅಪಾರ ಪ್ರೀತಿ ಮತ್ತು ಮಮತೆಯ ಕಡಲಲ್ಲಿ ಮಿಂದವರು. ಅದೇನೋ ಗೊತ್ತಿಲ್ಲ ಅಪ್ಪನಿಗೆ ಹೆಣ್ಣು ಮಕ್ಕಳೆಂದರೆ ತುಸು ಹೆಚ್ಚೇ ಸಾಫ್ಟ್ ಕಾರ್ನರ್.. ಹೆಣ್ಣು ಮಕ್ಕಳು ಅಪ್ಪನ ಪ್ರೀತಿಯ ಸಿಂಹಪಾಲನ್ನು ಪಡೆದರೆ ಗಂಡು ಮಕ್ಕಳು ಮುಂದೆ ಅಪ್ಪನ ಜವಾಬ್ದಾರಿಯಲ್ಲಿ ಪಾಲು ಪಡೆಯುತ್ತಾರೆ.... ಮಗಳೊಂದಿಗಿನ ಸಲಿಗೆ ಅಪ್ಪನನ್ನು ಒಳ್ಳೆಯ ಸ್ನೇಹಿತನನ್ನಾಗಿ ರೂಪಿಸಿದರೆ ಮಗಳು ತನ್ನ ಮೊದಲ ಸ್ನೇಹಿತನೊಂದಿಗೆ ತನ್ನೆಲ್ಲ ಭಾವನೆಗಳನ್ನು ಹಂಚಿಕೊಳ್ಳುತ್ತಾಳೆ.... ಅಪ್ಪ ಹೆಣ್ಣು ಮಕ್ಕಳ ಪಾಲಿನ ಮೊದಲ ಹೀರೋ



ಗಂಡು ಮಕ್ಕಳಿಗೆ ಉತ್ತಮ ನೌಕರಿ ದೊರೆತು ತನ್ನ ತಾಯಿ ತಂದೆ ಮತ್ತು ಮುಂದೆ ಮದುವೆಯಾದ ನಂತರ ತನ್ನನ್ನು ನಂಬಿ ಕೈ ಹಿಡಿದು ಬಂದ ಪತ್ನಿಗೆ ಉತ್ತಮ ಜೀವನ ಕೊಡುವ ಆಶಯ ಹೊಂದಿದರೆ ಹೆಣ್ಣು ಮಕ್ಕಳು ಕೂಡ ವಿದ್ಯಾವಂತರಾಗಿ ವಿವಾಹವಾಗಿ ಗಂಡನ ಮನೆಗೆ ಹೊರಡುತ್ತಾರೆ. ಆದರೆ ತಂದೆ ತಾಯಿಯ ಪ್ರೀತಿ ವಾತ್ಸಲ್ಯವನ್ನು ಹೊತ್ತು ಹೊರಡುವ ಮಕ್ಕಳು ಎಷ್ಟೇ ದೊಡ್ಡವರಾದರೂ ಮಕ್ಕಳಾಗಿಯೇ ಉಳಿಯುತ್ತಾರೆ.ತನ್ನ ಮಕ್ಕಳು ಅದಷ್ಟೇ ದೊಡ್ಡವರಾದರೂ ಅವರನ್ನು ಪ್ರೀತಿಸುವ ಅವರಿಗಾಗಿ ಮಿಡಿಯುವ, ದುಡಿಯುವ ತಾಯಿಯ ನಂತರದ ಏಕೈಕ ಜೀವಿ ತಂದೆ.... ಅದಕ್ಕೆ ಅಪ್ಪ ಕುಟುಂಬ ವತ್ಸಲ.

ಈ ಮುನ್ನ ತನ್ನ ತನ್ನ ತಂದೆಯನ್ನು ಮೈಸೂರು ಹುಲಿ ಎಂದು, ಬಾಸ್ ಎಂದು ಕರೆಯುತ್ತಿದ್ದ ಮಗ ತಾನು ತಂದೆಯಾದಾಗ ತನ್ನ ಮನೆ ಮತ್ತು ಕುಟುಂಬದ ನಿರ್ವಹಣೆಗಾಗಿ ಕೆಲಸ ನಿರ್ವಹಿಸುವಾಗ ಅಪ್ಪ ಅದೆಷ್ಟು ಗ್ರೇಟ್ ಎಂದು ಅರಿಯುತ್ತಾನೆ. ಅಪ್ಪಂದಿರು ಹಾಗೆ... ಸಂಬಳ ಇನ್ನಷ್ಟು ಹೆಚ್ಚು ದೊರೆತರೆ, ಕುಟುಂಬಕ್ಕೆ ಆಸರೆಯಾಗುತ್ತದೆ ಎಂಬ ಭಾವ. ತನಗಾಗಿ ವರ್ಷಕ್ಕೆ ಒಂದೆರಡು ಜೊತೆ ಬಟ್ಟೆ ಹೊಲಿಸುವ, ಅಪ್ಪ ಎರಡು ವರ್ಷಕ್ಕೊಂದು ಜೊತೆ ಚಪ್ಪಲಿ ಸವೆಸುವ ಅತ್ಯಂತ ಮಿತವ್ಯಯದ ವ್ಯಕ್ತಿ ಅಪ್ಪ. ಸ್ನಾನ ಮಾಡಿ ಒಳಉಡುಪುಗಳನ್ನು ಧರಿಸಿ ಮೇಲೆ ತಾವೇ ಇಸ್ತ್ರಿ ಮಾಡಿಕೊಂಡ ಪ್ಯಾಂಟು ಶರ್ಟು ಅಥವಾ ಅಂಗಿಯ ಜೊತೆ ಪಂಚೆ ಇಲ್ಲವೇ ಧೋತರವನ್ನು ಧರಿಸಿ ಎಣ್ಣೆ ಹಾಕಿ ಓರಣವಾಗಿ ಬಾಚಿ ದೇವರಿಗೊಂದು ಕೈಮುಗಿದರೆ ಅಪ್ಪನ ಅಲಂಕಾರ ಮುಗಿದಂತೆಯೇ..... ಅದಕ್ಕೆ ಅಪ್ಪ ಸರಳಾತಿಸರಳ ಜೀವಿ..... ಕಾಯಕ ಜೀವಿಯು ಹೌದು

ಸಂಬಳ ಬಂದ ದಿನ ತಿಂಗಳ ಮನೆ ಖರ್ಚಿಗೆ, ಬಾಡಿಗೆಗೆ, ಔಷಧಿಗೆ ಎಂದು ಹಣವನ್ನು ಎತ್ತಿಡುವ ತಂದೆ ಬೋನಸ್ ನಂತಹ ಹೆಚ್ಚುವರಿ ಹಣ ದೊರೆತಾಗ ಹೆಂಡತಿ ಮಕ್ಕಳಿಗೆ ಬಟ್ಟೆ ಬರೆ ಖರೀದಿಸಲು ಸಂತೆಗೆ ಕರೆದೊಯ್ದು ಅವರ ಸಂತೋಷವನ್ನು ಕಣ್ತುಂಬಿಕೊಳ್ಳುತ್ತಾನೆ. ಕೈಯಲ್ಲಿ ಹಣವಿಲ್ಲದಿದ್ದರೂ ಮಕ್ಕಳನ್ನು ತನಗೆ ಸರಿ ಎನಿಸಿದ ಒಳ್ಳೆಯ ಶಾಲೆ ಕಾಲೇಜುಗಳಿಗೆ ದಾಖಲು ಮಾಡುವ ಅಪ್ಪ ಮಕ್ಕಳ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವುದರ ಜೊತೆ ಜೊತೆಗೆ ಅವರ ಒಳ್ಳೆಯ ಬ್ರಾಂಡೆಡ್ ಬಟ್ಟೆಗಳು ಶೂಗಳು ಮೊಬೈಲ್, ಪ್ರವಾಸ, ಸ್ಟಡಿ ಟೂರ್‌ನಂತಹ ಮತ್ತಿತರ ಅವಶ್ಯಕತೆಗಳನ್ನು ಕೂಡ ಶತಾಯಗತಾಯ ಪೂರೈಸುತ್ತಾನೆ.... ಅದಕ್ಕೆ ನಾವು ಕೇಳಿದ್ದನ್ನು ಪೂರೈಸುವ ಕಲ್ಪವೃಕ್ಷ ಅಪ್ಪ

ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕಳುಹಿಸುವ ಅಪ್ಪ ರಜಾದಿನಗಳನ್ನು ಕಳೆಯಲು ಅವರು ಬರುವ ದಿನ ಚಿಕ್ಕ ಮಕ್ಕಳಂತೆ ಹೆಚ್ಚು ಸಂಭ್ರಮದಿಂದ ಅವರನ್ನು ಎದುರುಗೊಳ್ಳುತ್ತಾನೆ. ಮಗಳು ಇದ್ದಷ್ಟು ದಿನವೂ ಆಕೆಯ ಎಲ್ಲ ಬೇಕು ಬೇಡಗಳನ್ನು ಒದಗಿಸುತ್ತ ಆಕೆಯ ಹಾಸಿಗೆ ಹೊದಿಕೆಗಳನ್ನು ಕೂಡ ತಾನೆ ಹೊಂದಿಸಿಕೊಡುವ ಸಂಜೆಯಾದರೆ ಆಕೆಯನ್ನು ತಿನ್ನಲು ಹೊರಗೆ ಕರೆದೊಯ್ಯುವ, ಮರಳಿ ಹೋಗುವಾಗ ಬಟ್ಟೆ ಬರೆ ಕೊಡಿಸಿ ಆಕೆಯ ಕಣ್ಣರಳುವುದನ್ನು ನೋಡಿ ಸಂಭ್ರಮಿಸುವ ಅಪ್ಪ ಮಗಳ ಪಾಲಿಗೆ ಕೇಳಿದ್ದನ್ನು ಕೊಡುವ ಕಾಮಧೇನು.

ಮೊಮ್ಮಕ್ಕಳಂತೂ ಅಪ್ಪನ ನೆಚ್ಚಿನ ಗೆಳೆಯರು. ಹರೆಯದಲ್ಲಿ, ಕುಟುಂಬ ರಕ್ಷಣೆಯ ಹೊಣೆಗಾರಿಕೆಯಲ್ಲಿ ತನ್ನ ಮಕ್ಕಳೊಂದಿಗೆ ಬೆರೆತು ಆಡಲಾಗದ ಎಲ್ಲಾ ಆಟ ಪಾಠಗಳನ್ನು ತನ್ನ ಮೊಮ್ಮಕ್ಕಳ ಜೊತೆ ಆಡುವ ಅಪ್ಪ ಪುಟ್ಟ ಮಗುವಿನಂತೆ ಭಾಸವಾಗುತ್ತಾನೆ. ತನ್ನ ಮಕ್ಕಳಿಗೆ ಜಿಪುಣ ಎಂಬಂತೆ ತೋರುವ ಅಪ್ಪ ಮೊಮ್ಮಕ್ಕಳ ಪಾಲಿಗೆ ಕೇಳಿದ್ದನ್ನು ಕೊಡಿಸುವ ಕಾಮಧೇನು. ಅಮ್ಮ ಮತ್ತು ಅಜ್ಜಿಯರ ಕಣ್ಗಾವಲನು ತಪ್ಪಿಸಿ ಮೊಮ್ಮಕ್ಕಳಿಗಾಗಿ ಚಾಕಲೇಟುಗಳನ್ನು ಸಿಹಿ ತಿಂಡಿಗಳನ್ನು ಚಿಪ್ಸ್ ಗಳನ್ನು ತಂದು ಕೊಡುವ ಇಲ್ಲವೇ ಹೊರಗೆ ಕರೆದು ತಿನ್ನಿಸಿಕೊಂಡು ಬರುವ ಅಜ್ಜ ಮೊಮ್ಮಕ್ಕಳಿಗಾಗಿ ಸುಳ್ಳು ಹೇಳುವುದನ್ನು ಕಲಿಯುತ್ತಾನೆ, ತಂದೆ ತಾಯಿಯರ ಶಿಕ್ಷೆಯಿಂದ ರಕ್ಷಿಸುತ್ತಾನೆ..... ಅಪ್ಪ ಅಜ್ಜನಾಗಿ ಪರಿವರ್ತನೆ ಹೊಂದಿದಾಗ... ಹಳೇ ಬೇರು ಹೊಸ ಚಿಗುರು ಕೂಡಿದರೆ ಮರ ಸೊಗಸು ಎಂಬುದು ಇದಕ್ಕೇ ಇರಬೇಕು.

ಬದಲಾದ ಕಾಲಘಟ್ಟದಲ್ಲಿ ಅಪ್ಪ ಮಕ್ಕಳೊಂದಿಗೆ ಇನ್ನೂ ಹೆಚ್ಚು ಮಿಳಿತಗೊಳ್ಳುತ್ತಾನೆ. ಅಪ್ಪ ಮಕ್ಕಳನ್ನು ತಬ್ಬಿ ಮುದ್ದಾಡುತ್ತಾನೆ ಸ್ನೇಹ ಭಾವದಿಂದ ವರ್ತಿಸುತ್ತಾನೆ ಅವರಿಗೆ ಬೇಕಾದ ಸಾಮಾನುಗಳನ್ನು ಅವರನ್ನೇ ಕರೆದುಕೊಂಡು ಹೋಗಿ ಕೊಡಿಸುತ್ತಾನೆ. ವಾರಾಂತ್ಯಗಳಲ್ಲಿ ಹೊರಗೆ ಕರೆದೊಯ್ಯುತ್ತಾನೆ. ಹೆಂಡತಿ ಮಕ್ಕಳ ಸುಖದಲ್ಲಿ ಕುಟುಂಬದ ಏಳಿಗೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಪಾತ್ರಗಳು ಬದಲಾಗಿಲ್ಲ ಆದರೆ ಪಾತ್ರಧಾರಿಗಳು ಬದಲಾಗಿದ್ದಾರೆ. ಅವರ ವೇಷಭೂಷಣದಲ್ಲಿ ಕೊಂಚ ವ್ಯತ್ಯಾಸವಾಗಿದೆ. ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಸುರಿದಂತಹ ಎರಕವೇ.... ಅಪ್ಪ.

**ಅಪ್ಪನಿಗೆ ಯಾರು ಸಾಟಿ ಇಲ್ಲ**
**ಅಪ್ಪನೇ ಮಕ್ಕಳ ಬಾಳಿಗೆ ಎಲ್ಲ**
**ಎಲ್ಲರಿಗೂ ಅಪ್ಪ ಬೇಕೇ ಬೇಕಲ್ಲ**
**ನೂರ್ಕಾಲ ಬಾಳಲಿ ಹಾರೈಸಿರೆಲ್ಲ**

ಅರಿದೆಡೆ ಶರಣ
ದಿನಾಂಕ: 26-05-2025
ಸೋಮವಾರ ರಾತ್ರಿ
ಶ್ರೀ ಶನೇಶ್ವರ ದೇವರ ಪುರಾಣ
ಪ್ರವಚನ, ಭಜನೆ

ಶ್ರೀ ಶನೇಶ್ವರಸ್ವಾಮಿ ಜಯಂತಿ
ದಿನಾಂಕ: 27-05-2025 ಮಂಗಳವಾರ ಬೆಳಿಗ್ಗೆ 5-00 ಕ್ಕೆ ಗಂಗಾಪೂಜೆ,
ಬೆಳಿಗ್ಗೆ 6.00 ಗಂಟೆಗೆ ದೇವಸ್ಥಾನದಲ್ಲಿ ರುದ್ರಾಭಿಷೇಕ, ವಿಶೇಷ ಪೂಜೆ, ತೈಲಾಭಿಷೇಕ, ಪುಷ್ಪಲಂಕಾರ

ಮರೆತರೆ ಮಾನವ
7090966698
9448795049
7019370389
9481342032

ಪೂಜಾ ಸೇವಾ ವಿವರ : ನಿರಂತರ ಪೂಜೆ | ನವಗ್ರಹ ಶಾಂತಿ ಪೂಜೆ | ಸರ್ವಸೇವೆ ಪೂಜೆ | ರುದ್ರಾಭಿಷೇಕ | ಎಲೆ ಪೂಜೆ | ತೈಲಾಭಿಷೇಕ | ಪಂಚಾಮೃತಾಭಿಷೇಕ
ಶ್ರೀ ಕ್ಷೇತ್ರ ಶನೇಶ್ವರ ದೇವಸ್ಥಾನ ಸಮಿತಿ (ರಿ) ರಾಷ್ಟ್ರೀಯ ಹೆದ್ದಾರಿ ನಂ.50, 13ನೇ ವಾರ್ಡ್, ಪಂಚಾಚಾರ್ಯ ನಗರ, ಟಿ.ಬಿ.ಡ್ಯಾಂ, ಹೊಸಪೇಟೆ-583225

ಮನಸ್ಸು ಎಲ್ಲದಕ್ಕೂ ಮೂಲ,
ಅದನ್ನು ಸರಿಪಡಿಸಿಕೊಳ್ಳದ ಹೊರತು
ಇನ್ನಾವುದು ಸರಿಯಾಗದು
– ಡಿ.ವಿ.ಜಿ



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 24–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.48 ಅಡಿ |
| ಒಳ ಹರಿವು | 3897 ಕ್ಯುಸೆಕ್ |
| ಹೊರ ಹರಿವು | 2123 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.605 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.47 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 12 ಕ್ಯುಸೆಕ್ |
| ಸಾಮರ್ಥ್ಯ | 3.365 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

25–05–2025 – ಭಾನುವಾರ

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅಶ್ವಿನಿ |
| ಯೋಗ | : ಸೌಭಾಗ್ಯ |
| ಕರಣ | : ವಾಣಿಜ |
| ಸೂರ್ಯೋದಯ | : 05:43:30 |
| ಸೂರ್ಯಾಸ್ತ | : 19:04:31 |
| ರಾಹು ಕಾಲ | : 17:24–19:05 |
| ಯಮಘಂಡ ಕಾಲ | : 12:24–14:04 |
| ಗುಳಿಕ ಕಾಲ | : 15:44–17:24 |

### ಉದಯೋನ್ಮುಖ ಈಶಾನ್ಯ ಹೂಡಿಕೆದಾರರ ಶೃಂಗಸಭೆ 2025

# ನವೀಕರಿಸಬಹುದಾದ ಇಂಧನದಿಂದ ಈಶಾನ್ಯ ಬೆಳವಣಿಗೆಯ ದೃಷ್ಟಿಕೋನ : ಪ್ರಲ್ಹಾದ್ ಜೋಶಿ

**ನವದೆಹಲಿ:**
ನವೀಕರಿಸಬಹುದಾದ ಇಂಧನ ವಲಯವು ಈಶಾನ್ಯ ಪ್ರದೇಶದ ಬೆಳವಣಿಗೆಯ ದೃಷ್ಟಿಕೋನವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಶ್ರೀ ಪ್ರಲ್ಹಾದ್ ಜೋಶಿ ಹೇಳಿದರು.

ಉದಯೋನ್ಮುಖ ಈಶಾನ್ಯ ಹೂಡಿಕೆದಾರರ ಶೃಂಗಸಭೆ 2025 ಅನ್ನು ಉದ್ದೇಶಿಸಿ ಕೇಂದ್ರ ಸಚಿವರಾದ ಜೋಶಿ ಅವರು ಮಾತನಾಡಿದರು. ಕಳೆದ ಹನ್ನೊಂದು ವರ್ಷಗಳಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಈಶಾನ್ಯವು ಅಗಾಧವಾದ ಅಭಿವೃದ್ಧಿಯನ್ನು ಕಾಣುತ್ತಿದೆ. ನವದೆಹಲಿಯಲ್ಲಿ ನಡೆದ ಉದಯೋನ್ಮುಖ ಈಶಾನ್ಯ ಹೂಡಿಕೆದಾರರ ಶೃಂಗಸಭೆ 2025ರಲ್ಲಿ 'ಹಸಿರು ಈಶಾನ್ಯ: ಸಶಕ್ತ ಭಾರತಕ್ಕಾಗಿ ನವೀಕರಿಸಬಹುದಾದ ಇಂಧನ ಅಭಿವೃದ್ಧಿ' ಕುರಿತ ಅಧಿವೇಶನದಲ್ಲಿ ಸಚಿವರು ಈ ಹೇಳಿಕೆಗಳನ್ನು ನೀಡಿದರು.

**ಭಾರತದ ಹಸಿರು ಶಕ್ತಿಯ ಅಷ್ಟಲಕ್ಷ್ಮಿ**

ದೊಡ್ಡ ಜಲವಿದ್ಯುತ್ ಯೋಜನೆಗಳಿಂದ 129 GW ಗಿಂತ ಹೆಚ್ಚು ಸಾಮರ್ಥ್ಯ ಮತ್ತು ಪಂಪ್ ಮಾಡಿದ ಶೇಖರಣಾ ಸ್ಥಾವರಗಳಿಂದ 18 GW ಗಿಂತ ಹೆಚ್ಚು ಸಾಮರ್ಥ್ಯ ಸೇರಿದಂತೆ ಈಶಾನ್ಯವು ಇನ್ನೂ ಬಳಕೆಯಾಗದ ಅಪಾರ ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳನ್ನು ಹೊಂದಿದೆ ಎಂದು ಸಚಿವರು ತಿಳಿಸಿದರು. ಈ ನೈಸರ್ಗಿಕ ಅನುಕೂಲಗಳು, ಹೆಚ್ಚುತ್ತಿರುವ ಇಂಧನ ಬೇಡಿಕೆ ಮತ್ತು ಗಡಿಯಾಚೆಗಿನ ಕಾರ್ಯತಂತ್ರದ ಸ್ಥಾನೀಕರಣದೊಂದಿಗೆ ಸೇರಿಕೊಂಡು, ಈ ಪ್ರದೇಶವನ್ನು ಭಾರತದ ಹಸಿರು ಬೆಳವಣಿಗೆಯ ಯೋಜನೆಗಳಿಗೆ ಕೇಂದ್ರವನ್ನಾಗಿ ಮಾಡುತ್ತದೆ.

ಈಶಾನ್ಯವನ್ನು ಭಾರತದ ಅಷ್ಟಲಕ್ಷ್ಮಿ ಎಂದು ಬಣ್ಣಿಸಿದ ಅವರು, "ಹಸಿರು ಶಕ್ತಿಯ ಮೂಲಕ ಈಶಾನ್ಯದ ನೈಸರ್ಗಿಕ ಸಂಪನ್ಮೂಲಗಳನ್ನು ಸಂಪತ್ತನ್ನಾಗಿ ಪರಿವರ್ತಿಸುವ ಮೂಲಕ, ನಾವು ಪ್ರತಿಯೊಂದು ರಾಜ್ಯವನ್ನು ಶುದ್ಧ ಇಂಧನದ ಲಕ್ಷ್ಮಿಯನ್ನಾಗಿ ಮಾಡುತ್ತಿದ್ದೇವೆ, ಇದು ಭಾರತದ ಸಮೃದ್ಧಿಗೆ ಕೊಡುಗೆ ನೀಡುತ್ತದೆ" ಎಂದು ಹೇಳಿದರು. 'ಒಂದು ರಾಷ್ಟ್ರ, ಒಂದು ಗ್ರಿಡ್' ಅಡಿಯಲ್ಲಿ ಮುಂದಿನ ದಿನಗಳಲ್ಲಿ ಭಾರತದ ಗ್ರಿಡ್ ಸ್ಥಿರತೆಯನ್ನು ಖಚಿತಪಡಿಸುವಲ್ಲಿ ಈಶಾನ್ಯವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಹೇಳಿದರು.



**ಪ್ರಮುಖ ಹೂಡಿಕೆ ಬದ್ಧತೆಗಳು ಮತ್ತು ಕೈಗಾರಿಕಾ ಆಸಕ್ತಿ**

ಇತ್ತೀಚಿನ ಹೂಡಿಕೆದಾರರ ಭಾಗವಹಿಸುವಿಕೆಯ ಸಮಯದಲ್ಲಿ, ಪ್ರಮುಖ ಭಾರತೀಯ ಸಂಘಟಿತ ಸಂಸ್ಥೆಗಳು ಈ ಪ್ರದೇಶದ ನವೀಕರಿಸಬಹುದಾದ ಇಂಧನ ಸಾಮರ್ಥ್ಯದ ಬಗ್ಗೆ ಗಮನಾರ್ಹ ಆಸಕ್ತಿಯನ್ನು ವ್ಯಕ್ತಪಡಿಸಿವೆ ಎಂದು ಜೋಶಿ ಅವರು ಮಾಹಿತಿ ನೀಡಿದರು.

ನವೀಕರಿಸಬಹುದಾದ ಇಂಧನ (RE) ವಲಯದಲ್ಲಿ ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಹೂಡಿಕೆದಾರರ ನಡುವೆ ₹38,856 ಕೋಟಿ ಮೌಲ್ಯದ ಒಟ್ಟು 115 ತಿಳುವಳಿಕೆ ಒಪ್ಪಂದಗಳಿಗೆ (MoU) ಸಹಿ ಹಾಕಲಾಗಿದೆ. ಈಶಾನ್ಯದಲ್ಲಿ ಅಪಾರ ಉದ್ಯೋಗ ಮತ್ತು ಅಭಿವೃದ್ಧಿಯನ್ನು ತರುವ ಬಗ್ಗೆ ಇತ್ತೀಚಿನ ವಿವಿಧ ಹೂಡಿಕೆಗಳನ್ನು ಸಚಿವರು ವಿವರಿಸಿದರು.

**ಈಶಾನ್ಯಕ್ಕೆ ವಿಶೇಷ ಉಪಕ್ರಮಗಳು**

ಈ ಪ್ರದೇಶದಲ್ಲಿ ಶುದ್ಧ ಇಂಧನ ಅಭಿವೃದ್ಧಿಯನ್ನು ಉತ್ತೇಜಿಸಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ (MNRE) ತನ್ನ ವಾರ್ಷಿಕ ಯೋಜನಾ ಬಜೆಟ್‌ನಲ್ಲಿ 10% ಅನ್ನು ಈಶಾನ್ಯ ಪ್ರದೇಶಕ್ಕೆ ಪ್ರತ್ಯೇಕವಾಗಿ ಮೀಸಲಿಟ್ಟಿದೆ. ಈ ಮೀಸಲಾದ ಹಂಚಿಕೆಯ ಜೊತೆಗೆ, ಹೂಡಿಕೆಯನ್ನು ಮತ್ತಷ್ಟು ಪ್ರೋತ್ಸಾಹಿಸಲು ಸಚಿವಾಲಯವು ಹೆಚ್ಚಿನ ಆರ್ಥಿಕ ಸಹಾಯವನ್ನು ನೀಡುತ್ತಿದೆ. ಇದರಲ್ಲಿ ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿಯಲ್ಲಿ 10% ಹೆಚ್ಚಿನ ಕೇಂದ್ರ ಹಣಕಾಸು ನೆರವು (CFA) ಮತ್ತು PM-KUSUM ಯೋಜನೆಯ B ಮತ್ತು C ಘಟಕಗಳಿಗೆ 20% ಹೆಚ್ಚಿನ CFA ಸೇರಿವೆ.

ಮಿಜೋರಾಂನ ಚಂಫೈ ಜಿಲ್ಲೆಯಲ್ಲಿ 20 MW ಸೌರ ಉದ್ಯಾನವನವನ್ನು ಯಶಸ್ವಿಯಾಗಿ ನಿಯೋಜಿಸಲಾಗಿದೆ ಎಂಬ ಮಾಹಿತಿಯನ್ನು ಜೋಶಿ ಅವರು ಹಂಚಿಕೊಂಡರು. ಇದು ಪ್ರದೇಶದ ಯೋಜನಾ ಸಿದ್ಧತೆಯನ್ನು ಪ್ರದರ್ಶಿಸುತ್ತದೆ. ಭಾರತದ ಮೊದಲ ಶುದ್ಧ ಹಸಿರು ಹೈಡ್ರೋಜನ್ ಸ್ಥಾವರವನ್ನು ಹೊಂದಿರುವ ಅಸ್ಸಾಂನಲ್ಲಿ 25 MW ಹಸಿರು ಹೈಡ್ರೋಜನ್ ಸ್ಥಾವರವು ಅಭಿವೃದ್ಧಿ ಹಂತದಲ್ಲಿದೆ ಎಂದು ಅವರು ಉಲ್ಲೇಖಿಸಿದರು. ಸೂರ್ಯಮಿತ್ರ, ವರುಣ್ ಮಿತ್ರ ಮತ್ತು ಜಲ ಉರ್ಜಮಿತ್ರದಂತಹ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಈ ಪ್ರದೇಶದ 2000ಕ್ಕೂ ಹೆಚ್ಚು ವ್ಯಕ್ತಿಗಳಿಗೆ ತರಬೇತಿ ನೀಡಲಾಗಿದೆ ಎಂದು ಸಚಿವರು ಹೇಳಿದರು.

ಶುದ್ಧ ಇಂಧನ ರಫ್ತಿಗೆ ಈಶಾನ್ಯ ಪ್ರದೇಶವು ಭಾರತದ ಹೆಬ್ಬಾಗಿಲು ಭವಿಷ್ಯದ ಇಂಧನ ರಫ್ತು ಕೇಂದ್ರವಾಗಿ ಈ ಪ್ರದೇಶವನ್ನು ಸ್ಥಾನೀಕರಿಸಿದ ಸಚಿವರು, ಈಶಾನ್ಯವು ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ಭೂತಾನ್‌ಗೆ ಹತ್ತಿರದಲ್ಲಿದ್ದು, ಇದು ಗಡಿಯಾಚೆಗಿನ ವಿದ್ಯುತ್ ವ್ಯಾಪಾರಕ್ಕೆ ಸೂಕ್ತವಾಗಿದೆ ಎಂದು ಹೇಳಿದರು. ಇಂಗಾಲದ ತಟಸ್ಥತೆ ಮತ್ತು ಹಸಿರು ಪ್ರಮಾಣೀಕರಣದ ಕಡೆಗೆ ಬೆಳೆಯುತ್ತಿರುವ ಜಾಗತಿಕ ಚಳವಳಿ ಬಗ್ಗೆ ವಿವರಿಸಿದರು. ನವೀಕರಿಸಬಹುದಾದ ಇಂಧನದಲ್ಲಿನ ಹೂಡಿಕೆಗಳು ಪ್ರದೇಶ ಮತ್ತು ರಾಷ್ಟ್ರವನ್ನು ಇಂಗಾಲದ ಕಾರ್ಬನ್ ಬಾರ್ಡರ್ ಹೊಂದಾಣಿಕೆ ಕಾರ್ಯವಿಧಾನದಂತಹ ಅಂತರರಾಷ್ಟ್ರೀಯ ಮಾನದಂಡಗಳನ್ನು ಪೂರೈಸಲು ಸಜ್ಜುಗೊಳಿಸುತ್ತದೆ ಎಂದು ಹೇಳಿದರು.

ಉದ್ಯಮದ ನಾಯಕರು ಮತ್ತು ನಾವೀನ್ಯಕಾರರು ಪೂರ್ವಕ್ಕೆ ನೋಡಬೇಕು ಮತ್ತು ಈಶಾನ್ಯದ ಪರಿವರ್ತನೆಯಲ್ಲಿ ಭಾಗವಹಿಸಬೇಕು ಮತ್ತು ಅದರ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು ಎಂದು ಸಚಿವರು ಒತ್ತಾಯಿಸಿದರು. ಏಕ-ಗವಾಕ್ಷಿ ಅನುಮತಿಗಳು, ಬಂಡವಾಳ ಸಬ್ಸಿಡಿಗಳು ಮತ್ತು ಮೀಸಲಾದ ಸೌರ ಪಾರ್ಕ್ ಅಭಿವೃದ್ಧಿಯ ಮೂಲಕ ಹೂಡಿಕೆದಾರರಿಗೆ ಸಮಗ್ರ ಸರ್ಕಾರಿ ಬೆಂಬಲವನ್ನು ನೀಡುವ ಭರವಸೆ ನೀಡಿದರು. "ಹೂಡಿಕೆ ಮಾಡುವ ಸಮಯ ಈಗ. ಲಾಭಕ್ಕಾಗಿ ಮಾತ್ರವಲ್ಲ, ಪರಿಣಾಮಕ್ಕಾಗಿ, ಸ್ವಚ್ಛ ನಾಳೆ ಮತ್ತು ಸ್ವಾವಲಂಬಿ ಭಾರತಕ್ಕಾಗಿ," ಎಂದು ಸಚಿವರು ಹೇಳಿದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94486 33038
Email:- hampitimes@gmail.com

